17 October 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಹಿರಿಯರಿಗೆ ಧ್ವನಿ ಏರಿಸಿ ಮಾತನಾಡುವುದು ದೊಡ್ಡತನವಲ್ಲ , ಅವರಿಗೆ ಎದುರುತ್ತರ ಕೊಡದೆ ನಿಲ್ಲುವುದೇ ದೊಡ್ಡತನ!

ಸ್ನೇಹಾ ಆನಂದ್



ರೈತನೇ ನಾಡಿನ ಜೀವಾಳ: ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಪುಟ ಸಂ. 2



ಪುಟ ಸಂ. 3 ಯುವ ಜನಾಂಗದಲ್ಲಿ ಹೆಚ್ಚಾದ ಹೃದಯಾಘಾತ: ಡಾ. ಕೆ.ಎಸ್.ಸದಾನಂದ



ವಾರದೊಳಗೆ ಸಮಗ್ರ ವರದಿ ನೀಡಿ: ಸಚಿವ ರಾಮಲಿಂಗ ರೆಡ್ಡಿ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 298 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಪಾರಂಪರಿಕ ಸೈಕಲ್ ಸವಾರಿ



**ಮೈಸೂರು:** ಪಾರಂಪರಿಕ ಸೈಕಲ್ ಸವಾರಿಯು ಸಾಂಸ್ಕೃತಿಕ ಪರಂಪರೆ ಮತ್ತು ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ಸಾರಿತು. ಆರೋಗ್ಯಕರ ಜೀವನಕ್ಕೆ ಸೈಕಲ್ ಬಳಕೆಯ ಮಹತ್ವವನ್ನು ತಿಳಿಸಿತು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಗರದಲ್ಲಿ ಶುಕ್ರವಾರ ಪಾರಂಪರಿಕ ಸೈಕಲ್ ಸವಾರಿ ಆಯೋಜಿಸಲಾಗಿತ್ತು. ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಸವಾರಿ ನಡೆಯಿತು.

ನಗರದ ಪುರಭವನದ ಬಳಿಯಿಂದ ಆರಂಭವಾಗಿ ಹಲವು ಪಾರಂಪರಿಕ ಕಟ್ಟಡಗಳ ಬಳಿಗೆ ಸಂಚರಿಸಿತು. ಇತಿಹಾಸ ತಜ್ಞರು ನಿಗದಿತ ಕಟ್ಟಡ, ಸ್ಥಳದ ಪರಂಪರೆಯನ್ನು ತಿಳಿಸಿಕೊಟ್ಟರು. ಯುವಜನರು ಕೂಡ ಪಾಲ್ಗೊಂಡಿದ್ದರು.

ಪುರಾತತ್ವ ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆಯ ಆಯುಕ್ತ ಪಿ. ಶಿವರಾಜು ಚಾಲನೆ ನೀಡಿ ಮಾತನಾಡಿ, ಕರ್ನಾಟಕ ಸುಸಂಸ್ಕೃತ ಹಾಗೂ ಪರಂಪರೆಗೆ ಹೆಸರಾಗಿದೆ. ಜಿಲ್ಲೆಯು ಸಾಂಸ್ಕೃತಿಕ ರಾಜಧಾನಿಯಾಗಿ ಮಾತ್ರವಲ್ಲದೆ ಸ್ವರ್ಗ ಸದೃಶ್ಯವಾದ ಇತಿಹಾಸ ಹೊಂದಿದೆ. ಈ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವುದು ಎಲ್ಲರ ಕರ್ತವ್ಯ ಎಂದು ಹೇಳಿದರು.

ಹಿರಿಯ ನ್ಯಾಯಾಧೀಶ ನಾಗರಾಜ್ ಸಿದ್ದಪ್ಪ ಅಂಕಸದೊಡ್ಡಿ, ಟ್ರೆಕ್ಕಿಂಗ್ ಸಾಧಕಿ ಜಮ್ಮಡ ಪ್ರೀತ್ ಅಪ್ಪಯ್ಯ, ನಿವೃತ್ತ ಪ್ರಾಧ್ಯಾಪಕ ಎನ್.ಎಸ್.ರಂಗರಾಜು, ಕೆಎಸ್ಒಯು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥ ಶೆಲ್ವಪಿಳ್ಳೆ ಅಯ್ಯಂಗಾರ್, ಇಲಾಖೆ ಉಪ ನಿರ್ದೇಶಕಿ ಮಂಜುಳಾ ಇದ್ದರು.

## ರಾಜ್ಯದ ನೂತನ ರಾಜ್ಯಪಾಲರಾಗಿ ಸುಧಾ ಯಾದವ್ ಪ್ರಮಾಣವಚನ



**ಬೆಂಗಳೂರು:** ಕರ್ನಾಟಕದ ನೂತನ ರಾಜ್ಯಪಾಲರಾಗಿ ಸುಧಾ ಯಾದವ್ ಅವರು ಶುಕ್ರವಾರ ಬೆಂಗಳೂರಿನ ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರು ನೂತನ ರಾಜ್ಯಪಾಲರಿಗೆ ಅಧಿಕಾರ ಮತ್ತು ಗೌಪ್ಯತೆ ಪ್ರಮಾಣವಚನ ಬೋಧಿಸಿದರು.

ನಿರ್ಗಮಿತ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸುಧಾ ಯಾದವ್ ಅವರನ್ನು ಕರ್ನಾಟಕದ ರಾಜ್ಯಪಾಲರನ್ನಾಗಿ ನೇಮಕ ಮಾಡಿದ್ದರು.

ಸುಧಾ ಯಾದವ್ ಅವರು ಕರ್ನಾಟಕದ ರಾಜ್ಯಪಾಲ ಹುದ್ದೆ ಅಲಂಕರಿಸಿದ ಎರಡನೇ ಮಹಿಳೆ. ಇದಕ್ಕೂ ಮೊದಲು ವಿ.ಎಸ್. ರಮಾದೇವಿ ಅವರು 1999ರಿಂದ 2002ರವರೆಗೆ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು.

ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಸುಧಾ ಯಾದವ್ ಪತಿಯನ್ನು ಕಳೆದುಕೊಂಡಿದ್ದರು. ಅವರ ಪತಿ ಸುಖಬೀರ್ ಸಿಂಗ್ ಯಾದವ್ ಅವರು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಡೆಪ್ಯುಟಿ ಕಮಾಂಡೆಂಟ್ ಆಗಿದ್ದರು. 1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನಿ ಪಡೆಗಳ ವಿರುದ್ಧ ಹೋರಾಡುತ್ತಿದ್ದಾಗ ನಡೆದ ಫಿರಂಗಿ ದಾಳಿಯಲ್ಲಿ ಅವರು ಹುತಾತ್ಮರಾಗಿದ್ದರು. ಮರಣೋತ್ತರವಾಗಿ ಅವರಿಗೆ ಸೇನಾ ಪದಕ ನೀಡಿ ಗೌರವಿಸಲಾಗಿತ್ತು. ಪತಿ ನಿಧನದ ಬಳಿಕ ಸುಧಾ ಯಾದವ್ ಅವರು ಸಾರ್ವಜನಿಕ ಜೀವನ ಪ್ರವೇಶಿಸಿದರು.

1999ರಲ್ಲಿ ಹರಿಯಾಣದ ಮಹೇಂದ್ರಗಢ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಅವರು, 2004ರವರೆಗೆ ಸಂಸತ್ ಸದಸ್ಯೆಯಾಗಿ ಕಾರ್ಯನಿರ್ವಹಿಸಿದರು. ರಸಾಯನಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿರುವ ಸುಧಾ ಯಾದವ್ ಅವರು, ಭಾರತೀಯ ತಂತ್ರಜ್ಞಾನ ಸಂಸ್ಥೆಯಲ್ಲಿ (ಐಐಟಿ) ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿ ಪಡೆದಿದ್ದಾರೆ.

# ಭೀಕರ ಅಪಘಾತ: ನಾಲ್ವರು ಸಾವು

## ಪಿರಿಯಾಪಟ್ಟಣ: ಬಸ್–ಲಾರಿ ನಡುವೆ ಡಿಕ್ಕಿ | ಮೂವರು ಪ್ರಯಾಣಿಕರ ಸ್ಥಿತಿ





**ಪಿರಿಯಾಪಟ್ಟಣ:** ಹೊರವಲಯದ ಕಿರನಹಳ್ಳಿ ಗೇಟ್ ಸಮೀಪ ಶುಕ್ರವಾರ ಮುಂಜಾನೆ ಲಾರಿ ಮತ್ತು ಬಸ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ನಾಲ್ವರು ಮೃತಪಟ್ಟಿದ್ದಾರೆ. 35ಕ್ಕೂ ಹೆಚ್ಚು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಪಿರಿಯಾಪಟ್ಟಣ ಸಮೀಪದ ಬಿಎಂ ರಸ್ತೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಂಗಳೂರು ಕಡೆಯಿಂದ ಕೇರಳದತ್ತ ತೆರಳುತ್ತಿದ್ದ ಖಾಸಗಿ ಸ್ಲೀಪರ್ ಕೋಚ್ ಬಸ್‌ಗೆ ಲಾರಿ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಬಸ್ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತರನ್ನು ಬಸ್ ಚಾಲಕ ಸುನೀಲ್ (27), ಕ್ಲೀನರ್ ಸುಗೇಶ್ (28), ಪಿಎಚ್ ಡಿ ವಿದ್ಯಾರ್ಥಿ ಕೇರಳದ ಶಿಬಿಲ್ ಆದಮ್ (30), ಎಂಜಿನಿಯರಿಂಗ್ ವಿದ್ಯಾರ್ಥಿ ಅಫ್ತಾಬ್ (22) ಎಂದು ಗುರುತಿಸಲಾಗಿದೆ.

ಅಪಘಾತದ ತೀವ್ರತೆಗೆ ಬಸ್ ಮತ್ತು ಲಾರಿ ನಜ್ಜುಗುಜ್ಜಾಗಿವೆ. ಬಸ್‌ನಲ್ಲಿದ್ದ ಹಲವು ಪ್ರಯಾಣಿಕರು ಗಾಯಗೊಂಡಿದ್ದಾರೆ. ಹಲವರ ಸ್ಥಿತಿ ಗಂಭೀರವಾಗಿದೆ. ಅಪಘಾತದಲ್ಲಿ ಹಲವು ಪ್ರಯಾಣಿಕರ ಬೆನ್ನುಮೂಳೆ, ಕೈ, ಕಾಲು, ಸೊಂಟ ಸೇರಿದಂತೆ ದೇಹದ ವಿವಿಧ ಭಾಗಗಳಿಗೆ ಗಂಭೀರ ಗಾಯಗಳಾಗಿವೆ ಎಂದು ತಿಳಿದುಬಂದಿದೆ. ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲರೂ ಕೇರಳದವರು ಎನ್ನಲಾಗಿದೆ.

ಗಾಯಾಳುಗಳನ್ನು ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದವರನ್ನು

ಪುಟ 2ಕ್ಕೆ







### ರಕ್ಷಣಾ ಕಾರ್ಯಾಚರಣೆ

ಅಪಘಾತ ಸಂಭವಿಸುತ್ತಿದ್ದಂತೆ ಸ್ಥಳೀಯ ನಿವಾಸಿಗಳು, ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು. ಅಪಘಾತದ ತೀವ್ರತೆಗೆ ಬಸ್ ಜಖಂಗೊಂಡಿದ್ದರಿಂದ ಒಳಗೆ ಸಿಲುಕಿದ್ದ ಪ್ರಯಾಣಿಕರನ್ನು ಹೊರತೆಗೆದು ಗಾಯಾಳುಗಳ ರಕ್ಷಣೆಗೆ ಹರಸಾಹಸ ಪಟ್ಟರು. ಬಳಿಕ ಬಸ್‌ನ ತುರ್ತು ಬಾಗಿಲು ತೆರೆದು ಪ್ರಯಾಣಿಕರನ್ನು ಸುರಕ್ಷಿತವಾಗಿ ಹೊರತೆಗೆದರು.

ಗಾಯಾಳುಗಳನ್ನು ತಕ್ಷಣ ಆಂಬುಲೆನ್ಸ್‌ಗಳ ಮೂಲಕ ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಯಿತು. ಗಂಭೀರವಾಗಿ ಗಾಯಗೊಂಡವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಿಗೆ ರವಾನಿಸಲಾಯಿತು. ಅಪಘಾತದಲ್ಲಿ ಬಸ್ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅವರ ಒಂದು ಕಾಲು ಬಸ್‌ನೊಳಗೆ ಸಿಲುಕಿಕೊಂಡಿದ್ದರಿಂದ ಮೃತದೇಹವನ್ನು ಹೊರತೆಗೆಯಲು ಹೆಚ್ಚಿನ ಕಾರ್ಯಾಚರಣೆ ನಡೆಸಲಾಯಿತು.

ಮೃತರನ್ನು ಕಳೆದುಕೊಂಡ ಕುಟುಂಬಸ್ಥರ ಕಣ್ಣೀರಿನ ಆಕ್ರಂದನ ಮುಗಿಲು ಮುಟ್ಟಿದ್ದು, ಘಟನಾ ಸ್ಥಳದಲ್ಲಿ ಹೃದಯವಿದ್ರಾವಕ ವಾತಾವರಣ ನಿರ್ಮಾಣವಾಗಿತ್ತು.

**ಸುರಕ್ಷತೆ ಆತಂಕ:** ಕಿರನಲ್ಲಿ ಗೇಟ್ ಸಮೀಪ ಸಂಭವಿಸಿದ ಈ ಭೀಕರ ಅಪ ಘಾತ ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಮುಂಜಾನೆ ವೇಳೆ ವಾಹನಗಳ ಸಂಚಾರ, ರಸ್ತೆ ತಿರುವುಗಳು ಹಾಗೂ ಮಳೆಯಿಂದ ಉಂಟಾಗುವ ಅಡಚಣೆಗಳ ಹಿನ್ನೆಲೆಯಲ್ಲಿ ರಸ್ತೆ ಸುರಕ್ಷತೆಗಾಗಿ ಅಲ್ಲಲ್ಲಿ ಬ್ಯಾರಿಕೇಡ್, ರೋಡ್ ಹಮ್ಸ್, ಹಾಗೂ ಸಿಸಿ ಕ್ಯಾಮರಾ ಸೇರಿದಂತೆ ಮುನ್ನೆಚ್ಚರಿಕೆ ಕ್ರಮ ವಹಿ ಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

## ನವೆಂಬರ್‌ನಲ್ಲಿ ಬಸ್ ಟಿಕೆಟ್ ದರ ಏರಿಕೆ ಫಿಕ್ಸ್

**ಬೆಂಗಳೂರು:** ರಾಜ್ಯದ ಜನರ ಜೇಬಿಗೆ ಮತ್ತಷ್ಟು ಕತ್ತರಿ ಬೀಳುವ ಸಾಧ್ಯತೆ ದಟ್ಟವಾಗಿದೆ. ನಂದಿನಿ ಹಾಲಿನ ದರ ಹೆಚ್ಚಳ ಖಚಿತ ಆಗಿರುವ ಬೆನ್ನಲ್ಲೇ, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ ಟಿಕೆಟ್ ದರಗಳೂ ಸಹ ಭಾರೀ ಪ್ರಮಾಣದಲ್ಲಿ ಏರಿಕೆಯಾಗುವ ಮುನ್ಸೂಚನೆ ಸಿಕ್ಕಿದೆ.



ತೀವ್ರ ಆರ್ಥಿಕ ನಷ್ಟ ಹಾಗೂ ಹೆಚ್ಚುತ್ತಿರುವ ಇಂಧನ ವೆಚ್ಚದ ಹೊರೆಯನ್ನು ಜನರ ಮೇಲೆ ವರ್ಗಾಯಿಸಲು ಕೆಎಸ್‌ಆರ್‌ಟಿಸಿ ಪ್ರಯಾಣ ದರವನ್ನು ಶೇಕಡಾ 25ರಷ್ಟು ಹಾಗೂ ಬಿಎಂಟಿಸಿ ಬಸ್ ಪ್ರಯಾಣ ದರವನ್ನು ಶೇಕಡಾ 40ರಷ್ಟು ಹೆಚ್ಚಿಸಲು ಸಾರಿಗೆ ಸಂಸ್ಥೆಗಳ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ನಿವೃತ್ತ ಐಎಎಸ್ ಅಧಿಕಾರಿ ಅತುಲ್ ತಿವಾರಿ ನೇತೃತ್ವದ ಸಾರ್ವಜನಿಕ ಸಾರಿಗೆ ದರ ಪರಿಷ್ಕರಣೆ ಸಮಿತಿ, ಕೆಎಸ್ ಆರ್‌ಟಿಸಿ ಸೇರಿದಂತೆ ರಾಜ್ಯದ ಎಲ್ಲಾ ರಸ್ತೆ ಸಾರಿಗೆ ನಿಗಮಗಳ ಆರ್ಥಿಕ ಹೊರೆಯನ್ನು ತಗ್ಗಿಸಲು ಬಸ್ ಪ್ರಯಾಣ ದರವನ್ನು ಕನಿಷ್ಠ ಶೇ.25ರಷ್ಟು ಮತ್ತು ಬಿಎಂಟಿಸಿ ಪ್ರಯಾಣ ದರವನ್ನು ಶೇ 40ರಷ್ಟು ಹೆಚ್ಚಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ದರ ಪರಿಷ್ಕರಣೆ ಸಮಿತಿಯ ವರದಿಯನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ವಿಧಾನ ಪರಿಷತ್ ಚುನಾವಣೆ ಪ್ರಕ್ರಿಯೆ ನಡೆಯುತ್ತಿರುವು ದರಿಂದ, ಚುನಾವಣೆ ಮುಗಿದ ಬಳಿಕ ದರ ಹೆಚ್ಚಳದ ಆದೇಶ ಹೊರಬೀಳುವ ಸಾಧ್ಯತೆ ಇದೆ.

# ಕೆಪಿಎಸ್ಸಿ: ಸ್ವತಂತ್ರ ಆಯ್ಕೆ ಸಮಿತಿ ಅಗತ್ಯ

## ಅಕ್ರಮಗಳಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಿ: ಎಚ್.ಡಿ.ಕುಮಾರಸ್ವಾಮಿ



**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರು ಮತ್ತು ಅಧ್ಯಕ್ಷರ ನೇಮಕಾತಿಗೆ ಸ್ವತಂತ್ರ ಆಯ್ಕೆ ಪ್ರಕ್ರಿಯೆಗೆ ಸಮಿತಿ ರೂಪಿಸಬೇಕು ಮತ್ತು ಅಕ್ರಮಗಳಲ್ಲಿ ಭಾಗಿಯಾಗಿರುವುದು ಸಾಬೀತಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

ಬೆಂಗಳೂರಿನಲ್ಲಿ ಶುಕ್ರವಾರ ಉದ್ಯೋಗಾಕಾಂಕ್ಷಿಗಳೊಂದಿಗೆ ಸಂವಾದ ನಡೆಸಿದ ಅವರು, ಕೆಪಿಎಸ್‌ಸಿ ಮೇಲಿನ ಸಾರ್ವಜನಿಕರ ವಿಶ್ವಾಸ ಕುಸಿದಿದೆ. ಆಯೋಗದಲ್ಲಿ ಸಮಗ್ರ ಸುಧಾರಣೆಗಳ ಅಗತ್ಯವಿದೆ ಎಂದು ಹೇಳಿದರು.

'ಕೆಪಿಎಸ್‌ಸಿ ಚರ್ಚೆ ವಿತ್ ಎಚ್‌ಡಿಕೆ' ಕಾರ್ಯಕ್ರಮ ದಲ್ಲಿ ಮಾತನಾಡಿದ ಕುಮಾರಸ್ವಾಮಿ, ನಿಮ್ಮ ಬೇಡಿ ಕೆಗಳನ್ನು ನಾಳೆ ಬೆಳಗ್ಗೆಯೇ ಈಡೇರಿಸುತ್ತೇನೆ ಎಂದು ಭರವಸೆ ನೀಡುವ ಸ್ಥಿತಿಯಲ್ಲಿ ನಾನಿಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ, ಅಭ್ಯರ್ಥಿಗಳ ಸಮಸ್ಯೆಗಳನ್ನು ರಾಜ್ಯ ಸರ್ಕಾರದ ಗಮನಕ್ಕೆ ತರುವುದಾಗಿ ಹಾಗೂ 2028ರ ವಿಧಾನ ಸಭೆ ಚುನಾವಣೆ ಬಳಿಕ ಆಡಳಿತ ನಡೆಸುವ ಅವಕಾಶ ಸಿಕ್ಕರೆ ಈ ವಿಚಾರ ಗಳಿಗೆ ಪರಿಹಾರ ಕಂಡು ಕೊಳ್ಳಲು ಪ್ರಯತ್ನಿಸುವುದಾಗಿ ಭರವಸೆ ನೀಡಿ ದರು.

ಪಂಚಾ ಯಿ ತಿ ಅಭಿವೃದ್ಧಿ ಅಧಿಕಾರಿ, ಗ್ರಾ ಮ ಆಡಳಿತ ಅಧಿಕಾರಿ, ಕರ್ನಾ ಟಕ ಆಡಳಿತ ಸೇವೆ ಸೇರಿದಂತೆ ವಿವಿಧ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ನಡೆ ದಿವೆ ಎಂದು ಅಭ್ಯರ್ಥಿಗಳು ಆರೋಪಿಸಿದರು. ಅಭ್ಯರ್ಥಿಗಳ ಅಂಕಗಳಲ್ಲಿ ವ್ಯತ್ಯಾಸ, ಒಎಂಆರ್ ಉತ್ತರ ಪತ್ರಿಕೆಗಳ ತಿರುಚು ವಿಕೆ ಶಂಕೆ, ಪರೀಕ್ಷಾ ಕೇಂದ್ರಗಳಲ್ಲಿನ ಕ್ಯಾಮೆರಾಗಳು ಕಾರ್ಯ ನಿರ್ವಹಿಸದಿರುವುದು ಮತ್ತು ನೇಮಕಾತಿ ವಿಳಂಬದ ಬಗ್ಗೆ ಅವರು ಅಸಮಾ ಧಾನ ವ್ಯಕ್ತಪಡಿಸಿ ದರು.

ಅಭ್ಯರ್ಥಿ ಗಳು ನಡೆಸಿದ ಪ್ರತಿಭಟನೆಗಳಿಂದಲೇ ಕೆಲವು ಅಕ್ರಮಗಳು ಬೆಳಕಿಗೆ ಬಂದಿವೆ. ಆದರೆ, ತನಿಖೆ ನಡೆಸಿದ ಬಳಿಕ ಯಾವುದೇ ಕ್ರಮ ಕೈಗೊಳ್ಳದಿದ್ದರೆ ಅದರಿಂದ ಪ್ರಯೋಜನವಿಲ್ಲ ಎಂದು ಎಚ್ಚರಿಸಿದರು.

ಪುಟ 2ಕ್ಕೆ

## 29ರಿಂದ ಹಾಸನಾಂಬೆ ದರ್ಶನ

**ಹಾಸನ:** ಹಾಸನದ ಅಧಿದೇವತೆ ಶ್ರೀ ಹಾಸನಾಂಬೆ ದೇವಿ ದರ್ಶನೋತ್ಸವ ಅಕ್ಟೋಬರ್ 29ರಿಂದ ಆರಂಭವಾಗಲಿದೆ. ವರ್ಷಕ್ಕೊಮ್ಮೆ ಮಾತ್ರ ಗರ್ಭಗುಡಿ ಬಾಗಿಲು ತೆರೆಯುವ ಐತಿಹಾಸಿಕ ಉತ್ಸವ ಅ.29 ರಿಂದ ನ.8 ರವರೆಗೆ ಒಟ್ಟು 11 ದಿನಗಳ ಕಾಲ ನಡೆಯಲಿದೆ.

ಸಂಪ್ರದಾಯದಂತೆ ಮೊದಲ ಮತ್ತು ಕೊನೆಯ ದಿನ ಸಾರ್ವಜನಿಕ ದರ್ಶನ ಇರುವುದಿಲ್ಲ. ಭಕ್ತಾದಿಗಳಿಗೆ ಅ.30ರ ಶುಕ್ರವಾರದಿಂದ ನವೆಂಬರ್ 10ರ ಮಂಗಳವಾರದವರೆಗೆ (12 ದಿನಗಳು) ದೇವಿ ದರ್ಶನಕ್ಕೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಅಂದು ಪ್ರತಿದಿನ ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಮತ್ತು ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 10.30 ರವರೆಗೆ ಭಕ್ತರಿಗೆ ದರ್ಶನಕ್ಕೆ ಅವಕಾಶವಿರುತ್ತದೆ. (ಮಧ್ಯಾಹ್ನ 1 ರಿಂದ 3 ರವರೆಗೆ ನೈವೇದ್ಯ ಹಾಗೂ ಧಾರ್ಮಿಕ ಪೂಜೆಗಳಿಗಾಗಿ ವಿರಾಮ).



## ಸಿದ್ದರಾಮಯ್ಯ ಗುರಿಯಾಗಿಸಿ ಜಮೀರ್, ಪ್ರಿಯಾಂಕ್ ಖರ್ಗೆ ಸ್ಟಿಂಗ್

### ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೊಸ ಬಾಂಬ್



**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರಿಯಾಗಿಸಿ ನಡೆದಿದೆ ಎನ್ನಲಾದ ಸ್ಟಿಂಗ್ ಆಪರೇಷನ್ ಹಿಂದೆ ಸಚಿವರಾದ ಜಮೀರ್ ಅಹ್ಮದ್ ಖಾನ್ ಮತ್ತು ಪ್ರಿಯಾಂಕ್ ಖರ್ಗೆ ಕೈವಾಡವಿರಬಹುದು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಶಂಕೆ ವ್ಯಕ್ತಪಡಿಸಿದರು.

ಎಚ್.ಡಿ.ಕುಮಾರಸ್ವಾಮಿಯವರೇ ಸ್ಟಿಂಗ್ ವಿಡಿಯೋ ಮಾಡಿಸಿರಬಹುದು ಎಂಬ ಜಮೀರ್ ಅಹ್ಮದ್ ಆರೋ ಪಕ್ಕೆ ತಿರುಗೇಟು ನೀಡಿದ ಎಚ್‌ಡಿಕೆ ಅವರು, ಸಿದ್ದರಾ ಮಯ್ಯ ಆರಂಭದಲ್ಲಿ ಜಮೀರ್‌ಗೆ ಸಚಿವ ಸ್ಥಾನ ನೀಡ ಬಾರದು ಎಂದು ಯಾಕೆ ಹಠ ಹಿಡಿದಿದ್ದರು? ಯಾಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರು ದೆಹಲಿಗೆ ಹೋಗಿದ್ದೇ ಜಮೀರ್ ಅಹ್ಮದ್ ಅವರನ್ನು ಸಂಪುಟದಿಂದ ಕೈಬಿಡುವಂತೆ ಹೈಕ ಮಾಂಡ್‌ಗೆ ತಿಳಿಸಲು ಎಂಬ ಚರ್ಚೆಗಳು ರಾಜಕೀಯ ವಲಯದಲ್ಲಿ ನಡೆಯುತ್ತಿವೆ. ಈ ವಿಷಯ ಜಮೀರ್ ಗಮನಕ್ಕೆ ಬಂದಿದ್ದರಿಂದ, ತಾವೇ ಖುದ್ದಾಗಿ ಸ್ಟಿಂಗ್ ಆಪರೇಷನ್ ಟೀಂ ಜೊತೆ ಕೈಜೋಡಿಸಿ ಈ ವಿಡಿಯೋ ಬಿಡುಗಡೆ ಮಾಡಿಸಿರಬಹುದು. ಈ ಬಗ್ಗೆ ತಮಗೆ ಪ್ರತ್ಯೇಕ ವರದಿಗಳು ಲಭ್ಯವಾಗುತ್ತಿದ್ದು, ಹೆಚ್ಚಿನ ಮಾಹಿತಿ ಸಂಗ್ರಹಿಸುತ್ತಿರುವುದಾಗಿ ಹೇಳಿದರು.

**ಕಾಂಗ್ರೆಸ್ ಒಳಗೆಯೇ ಸಂಚು**

ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧವೂ ತೀವ್ರ ಆಪಾ ದನೆ ಮಾಡಿದ ಎಚ್‌ಡಿಕೆ, ಪ್ರಿಯಾಂಕ್ ಖರ್ಗೆ ಅವರ ಇತ್ತೀಚಿನ ನಡವಳಿಕೆಗಳನ್ನು ಗಮನಿಸಿದರೆ, ಸಿದ್ದ ರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಕಾಂಗ್ರೆಸ್ ಒಳಗೆಯೇ ದೊಡ್ಡ ಸಂಚು ನಡೆದಿರುವುದು ಸ್ಪಷ್ಟವಾಗುತ್ತದೆ. ಹಿಂದೆ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ತಪ್ಪಲು ಸಿದ್ದರಾಮಯ್ಯ ಅವರೇ ಪ್ರಮುಖ ಕಾರಣ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ವಿರುದ್ಧ ಈ ಸ್ಟಿಂಗ್ ಷಡ್ಯಂತ್ರ ರೂಪಿಸಲಾಗಿದೆಯೇ ಎಂಬ ಬಲವಾದ ಅನುಮಾನ ಮೂಡುತ್ತಿದೆ ಎಂದು ಬಾಂಬ್ ಸಿಡಿಸಿದರು. ಸಿದ್ದರಾಮಯ್ಯನವರಿಗೆ ಸ್ವಪಕ್ಷೀಯರೇ ಬೆನ್ನಿಗೆ ಚೂರಿ ಹಾಕಿದ್ದಾರೋ ಅಥವಾ ಎದುರಿನಿಂದಲೇ ಚೂರಿ ಹಾಕಿದ್ದಾರೋ ಎಂಬುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ.

ಪುಟ 2ಕ್ಕೆ



# ರೈತನೇ ನಾಡಿನ ಜೀವಾಳ: ಸಚಿವ ಡಾ.ಯತೀಂದ್ರ

## ರೈತ ದಸರಾ ಕಾರ್ಯಕ್ರಮ । ರೈತ ದಸರಾ ಮೆರವಣಿಗೆ । ಕೃಷಿ ಸಚಿವ ಪಿ.ಎಂ.ನರೇಂದ್ರ ಸ್ವಾಮಿ ನಂದಿಧ್ವಜಕ್ಕೆ ಪೂಜೆ

ಮೈಸೂರು: ಎಷ್ಟೇ ಮುಂದುವರಿದ ದೇಶವಾದರೂ ಕೃಷಿ ನಿರ್ಲಕ್ಷಿಸಿದರೆ ಆ ದೇಶ ಅಭಿವೃದ್ಧಿ ಹೊಂದುವುದಿಲ್ಲ ಏಕೆಂದರೆ ಮಾನವ ಸಂಕುಲ ಬದುಕಬೇಕೆಂದರೆ ಆಹಾರ ಬೇಕು ಹಾಗಾಗಿ ರೈತನೇ ನಾಡಿನ ಜೀವಾಳ ಎಂದು ನಗರಾಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮೈಸೂರು ದಸರಾ ಮಹೋತ್ಸವ ಪ್ರಯುಕ್ತ ನಗರದ ಜೆ.ಕೆ ಗ್ರೌಂಡ್ ಆವರಣದಲ್ಲಿ ಆಯೋಜಿಸಲಾಗಿದ್ದ ರೈತ ದಸರಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಶೇ.46ರಷ್ಟು ಉದ್ಯೋಗ ಸೃಷ್ಟಿಯಾಗುವುದೇ ಕೃಷಿ ವಲಯದಲ್ಲಿ ಭಾರತದಲ್ಲಿ ಈಗಲೂ ಹಳ್ಳಿಗಳೇ ಹೆಚ್ಚಾಗಿವೆ ಇದರಿಂದಲೇ ಕೃಷಿ ವಲಯ ಇನ್ನೂ ಗಟ್ಟಿಯಾಗಿದೆ. ಬರದ ಪರಿಸ್ಥಿತಿಯಲ್ಲೂ ರೈತರಿಗೆ ನಮ್ಮ ಸರಕಾರ ನೆರವಾಗಿದೆ ಈಗಾಗಲೇ 1250 ಕೋಟಿ ರೂ. ಪರಿಹಾರ ಘೋಷಣೆ ಮಾಡಲಾಗಿದೆ, ಮುಂದಿನ ದಿನಗಳಲ್ಲಿ ಕೇಂದ್ರ ಸರಕಾರ ಸಹಕಾರ ನೀಡಿದರೆ ಕೃಷಿ ಸಾಲ ಮನ್ನಾ ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಾಗಾಗಿ ರೈತರು ಭಯ ಪಡುವ ಅಗತ್ಯವಿಲ್ಲ ನೀವು ನಿಜವಾದ ಕಾಯಕ ಯೋಗಿ ಎಲ್ಲರೂ ದಸರಾದಲ್ಲಿ ಭಾಗವಹಿಸಿ ಸಂಭ್ರಮಿಸಿ ಎಂದು ಶುಭಕೋರಿದರು.

ಕೃಷಿ ಸಚಿವ ಎಂ.ಪಿ.ನರೇಂದ್ರಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಭೀಕರ ಬರಗಾಲದ ಮಧ್ಯೆಯೂ ರೈತ ದಸರಾವನ್ನು ವಿಜೃಂಭಣೆಯಿಂದ ಮಾಡುತ್ತಿದ್ದೇವೆ ಏಕೆಂದರೆ ಇದು ರೈತರ ಬೆವರಿನ ಪ್ರತಿಫಲದ ಸಂಭ್ರಮ ಹಾಗಾಗಿ ಬರವಿದೆ ಎಂದು ಭಯಪಡಬೇಡಿ ನಮ್ಮ ಸರಕಾರ ನಿಮ್ಮ ಜೊತೆ ಇರಲಿದೆ ಈಗಾಗಲೇ ಮೊದಲ ಹಂತದ ಬರ ಪರಿಹಾರ ನೀಡಿದ್ದೇವೆ ಮುಂದಿನ ದಿನಗಳಲ್ಲಿ ಹೆಚ್ಚಿನ ಪರಿಹಾರ ನೀಡಲಿದ್ದೇವೆ. ಬರದ ಸಂಕಷ್ಟದಲ್ಲಿರುವ ರೈತರಿಗಾಗಿ ಈಗಾಗಲೇ ನೇಗಿಲಯೋಗಿ ಯೋಜನೆಯನ್ನು ಪ್ರಾಯೋಗಿಕವಾಗಿ ಜಿಲ್ಲೆಗೆ 2 ತಾಲ್ಲೂಕುಗಳಲ್ಲಿ ಜಾರಿಗೆ ತರಲಾಗಿದ್ದು ಮುಂದಿನ ವರ್ಷ ಎಲ್ಲಾ ತಾಲ್ಲೂಕುಗಳಲ್ಲೂ ಜಾರಿಯಾಗಲಿದೆ ಈ ಯೋಜನೆಯಿಂದ 3 ಎಕರೆ ಒಳಗಡೆ ಕೃಷಿ ಭೂಮಿ ಹೊಂದಿರುವ ರೈತರಿಗೆ ನೆರವಾಗಲಿದೆ ಹಾಗೂ ಬರದಲ್ಲಿ ಅಲ್ಪಾವಧಿ ಬೆಳೆಗಳ ಬೀಜೋತ್ಪಾದನೆ ಸಂಶೋಧನೆಗಾಗಿ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆ ಮಾಡಿಸಲಾ ಗುತ್ತಿದೆ, ಆಧುನಿಕ ಕೃಷಿ ಪದ್ದತಿಯಿಂದ ಬದಲಾವಣೆ ತರುವುದು ನನ್ನ ಉದ್ದೇಶ ಎಂದು ಹೇಳಿದರು.

### ವಿದೇಶಿ ಕುರಿಸಾಕಾಣಿಯತ್ತ ಯುವರೈತ ಹರ್ಷಿತ್ ಗೌಡ

ಮೈಸೂರು: ಮೈಸೂರಿನ ಯುವ ರೈತನಾದ ಹರ್ಷಿತ್ ಗೌಡ ನಂಜನಗೂಡು ತಾಲ್ಲೂಕಿನ ಕಲ್ಲುಂದ



ಗ್ರಾಮದ ಐಸಿರಿ ಶಿಪ್ ಫಾರಂನಲ್ಲಿ ದಕ್ಷಿಣ ಆಫ್ರಿಕಾ ತಳಿಯ ಕುರಿ ಸಾಕಾಣೆ ಮಾಡುತ್ತಿದ್ದು, ಡಾಲ್ಫರ್ ಕ್ವಾಲಿಟಿ ಚೆನ್ನಾಗಿದೆ. ಎರಡೂವರೆ ವರ್ಷದಲ್ಲಿ ಹೆಚ್ಚಿನ ತೂಕದ ಇಳುವರಿ ಬರುತ್ತವೆ. ರೈತರಿಗೆ ಹೆಚ್ಚು ಸಾಕಲು ಅನೂಕೂಲ ಆಗಲಿದೆ. ಬಂಡೂರು ಕುರಿಗಳು ಕನಿಷ್ಠ ಎರಡು ವರ್ಷಕ್ಕೆ 45 ಕೆ.ಜಿ. ತೂಕ ಬರುತ್ತವೆ. ಆದರೆ, ಎರಡು ವರ್ಷದಲ್ಲಿ 110ಕೆ.ಜಿ. ಯವರೆಗೆ ತೂಕ ಬರಲಿವೆ. ನಮ್ಮಲ್ಲಿ 25 ವಿದೇಶಿ ಮರಿ ಹಾಗೂ 200 ಬಂಡೂರಿ ಮರಿಗಳಿದ್ದು, ವರ್ಷಕ್ಕೆ ಐದು ಲಕ್ಷದವರೆಗೆ ಆದಾಯ ಬರುತ್ತಿದೆ. ಕೃಷಿಯಲ್ಲಿ ನಷ್ಟ ಎನ್ನುವುದು ನಾನು ಒಪ್ಪಲ್ಲ. ತಿಳಿದು ಕೃಷಿ ಮಾಡಿದರೆ ಹೆಚ್ಚು ಲಾಭಗಳಿಸಬಹುದು ಎಂದು ತಮ್ಮ ಮೂರು ವರ್ಷದ ಯಶಸ್ವಿ ರೈತ ಬದುಕಿನ ಬಗ್ಗೆ ತಿಳಿಸಿಕೊಟ್ಟರು.



### ರೈತರಿಗೆ ಸನ್ಮಾನ

ಈ ವೇಳೆ ಹೊನ್ನಾರು ಸ್ಮರಣೆ ಸಂಚಿಕೆ ಬಿಡುಗಡೆಗೊಳಿಸಲಾಯಿತು ಮತ್ತು ಜಿಲ್ಲೆಯಲ್ಲಿ ಕೃಷಿಯಲ್ಲಿ ಸಾಧನೆ ಮಾಡಿದ ರೈತರಿಗೆ ಶ್ರೇಷ್ಠ ಕೃಷಿಕ ರೈತ ಪ್ರಶಸ್ತಿಯನ್ನು ನೀಡಲಾಯಿತು ಹಾಗೂ ಪ್ರಗತಿಪರ ರೈತ ಮಹಿಳೆಯರಿಗೆ ಸೇರಿ ಒಟ್ಟು 10 ರೈತರಿಗೆ ಸನ್ಮಾನಿಸಲಾಯಿತು. ಭತ್ತ ಹಾಗೂ ಕಬ್ಬು ನಾಟಿ ಯಂತ್ರ, ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರೇಷ್ಮೆ ಬೆಳೆ ಕುರಿತು, ಕೃಷಿ ಇಲಾಖೆ ರಸಗೊಬ್ಬರ ಬಳಕೆ ದುಷ್ಪರಿಣಾಮ ಹಾಗೂ ಹವಾಮಾನ ವೈಪರೀತ್ಯಕ್ಕೆ ಪರ್ಯಾಯ ಬೆಳೆ ಕುರಿತು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಮಳಿಗೆ ಹಸಿರು ಮೇವಿನ ಬೆಳೆಗಳ ಬಗ್ಗೆ, ಮೈಸೂರು ಸಾಮಾಜಿಕ ಅರಣ್ಯ ವಿಭಾಗ ಮಳಿಗೆಯು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಸಂಬಂಧಿಸಿದಂತೆ ಮಾಹಿತಿ ಒದಗಿಸುತ್ತಿವೆ. ರೇಷ್ಮೆ ಹಾಗೂ ಪಶುಸಂಗೋಪನಾ ಸಚಿವ ಪುಟ್ಟರಂಗಶೆಟ್ಟಿ, ಮುಜರಾಯಿ ಇಲಾಖೆ ಹಾಗೂ ಮೀನುಗಾರಿಕೆ ಸಚಿವ ಬಸವಂತಪ್ಪ, ಅಬಕಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ, ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಶಿವಕುಮಾರ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಕೃಷಿ ಇಲಾಖೆ ಆಯುಕ್ತ ಸತೀಶ್ ಇತರರು ಇದ್ದರು.

### ಹಸಿರ ಜಂಬೂ ಸವಾರಿ

ಮೈಸೂರು: ಎತ್ತ ನೋಡಿದರತ್ತ ಹಸಿರು ಶಾಲು, ನಗರದೊಳಗೆ ರಸ್ತೆಗಿಳಿದಿದ್ದ ಎತ್ತಿನಗಾಡಿ ಅವುಗಳೊಟ್ಟಿಗೆ ಹೆಜ್ಜೆ ಹಾಕಿದ ಸಾವಿರಾರು ರೈತರು ಅವರಿಗೆ ಸಾಥ್ ನೀಡಿದ ಕಲಾತಂಡ ಹಾಗೂ ಸ್ತಬ್ಧಚಿತ್ರಗಳ ಮೆರವಣಿಗೆಯ ನೋಟ ನಗರದಲ್ಲಿ ಹಸಿರು ಜಂಬೂ ಸವಾರಿ ಮೆರವಣಿಗೆ ನೆನಪಿಸಿದ್ದು ವಿಶೇಷ.

ರೈತ ದಸರಾ ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ರೈತ ದಸರಾ ಮೆರವಣಿಗೆಗೆ ಕೃಷಿ ಸಚಿವ ಪಿ.ಎಂ.ನರೇಂದ್ರ ಸ್ವಾಮಿ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ವಿವಿಧ ತಳಿಯ ರಾಸುಗಳು, ಬಂಡೂರು ಕುರಿ, ಪೂಜಾ ಕುಣಿತ, ಡೊಳ್ಳು ಕುಣಿತ, ಕೊಡವ ರೈತರ ನೃತ್ಯ, ಎತ್ತಿನ ಗಾಡಿಗಳು, ಕೃಷಿ ಯಂತ್ರಗಳು ಸೇರಿ ಹಲವಾರು ರೈತರು ಉಡುಗೆ ತೊಡುಗೆ ತೊಟ್ಟು ಮೆರವಣಿಗೆಯಲ್ಲಿ ಸಾಗಿದರು. ಮಾತ್ರವಲ್ಲದೆ ಕೃಷಿ ಇಲಾಖೆ, ಪಶು ಸಂಗೋಪನಾ ಇಲಾಖೆಯ ಸ್ತಬ್ಧಚಿತ್ರಗಳ ಮೆರವಣಿಗೆಯು ಕೋಟೆ ಆಂಜನೇಯಸ್ವಾಮಿ ದೇವಸ್ಥಾದಿಂದ ಜೆ.ಕೆ.ಗ್ರೌಂಡ್ ಆವರಣದವರೆಗೂ ಸಾಗಿತು.



## ಅಹೋರಾತ್ರಿ ಧರಣಿ 53ನೇ ದಿನಕ್ಕೆ ಕಾಲಿಟ್ಟ ಅಹೋರಾತ್ರಿ ಧರಣಿ

ಗುಂಡ್ಲುಪೇಟೆ:ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರೈತರು ನಡೆಸುತ್ತಿರುವ ಅಹೋರಾತ್ರಿ ಧರಣಿ 53ನೇ ದಿನಕ್ಕೆ ಕಾಲಿಟ್ಟರೂ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಖಂಡಿಸಿ ರೈತ ಸಂಘದ ವತಿಯಿಂದ ಬಹಿರಂಗ ಪ್ರತಿಭಟನಾ ಸಮಾವೇಶ ನಡೆಸಲಾಯಿತು.

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಿಂದ ಹೊರಟ ಪ್ರತಿಭಟನಾಕಾರರು ಎತ್ತಿನ ಗಾಡಿ ಹಾಗೂ ಟ್ರ್ಯಾಕ್ಟರ್ ನಲ್ಲಿ ರಾಷ್ಟ್ರೀಯ ಹೆದ್ದಾರಿ ಮೂಲಕ ಮೆರವಣಿಗೆಯಲ್ಲಿ ಸಾಗಿ ತಾಲೂಕು ಕಚೇರಿ ಮುಂಭಾಗ ಜಮಾವಣೆಗೊಂಡು ನಂತರ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಎ.ಎಂ. ಮಹೇಶ್ ಪ್ರಭು ಮಾತನಾಡಿ, ಕಳೆದ ವರ್ಷ 37 ದಿನಗಳ ಕಾಲ ಅಹೋರಾತ್ರಿಧರಣಿ ನಡೆಸಲಾಗಿತ್ತು. ಈ ವರ್ಷವೂ ರೈತರ ಬೇಡಿಕೆಗಳು ಈಡೇರದ ಕಾರಣ 53 ದಿನಗಳಿಂದ ಅಹೋರಾತ್ರಿ ಧರಣಿ ನಡೆಸಲಾಗುತ್ತಿದೆ. ಆದರೂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರು ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಚುನಾವಣೆ ಸಂದರ್ಭದಲ್ಲಿ ಮತದಾರರು ಆಮಿಷಗಳಿಗೆ ಒಳಗಾಗದೆ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಕರೆ ನೀಡಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಮಾತನಾಡಿ, 2025ರಲ್ಲಿ ಐದು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟುಕೊಂಡು 37 ದಿನಗಳ ಕಾಲ ಆರೋರಾ ಧರಣಿ ನಡೆಸಲಾಗಿತ್ತು. ಅಂದು ಸಚಿವ ಈಶ್ವರ್ ಖಂಡ್ರೆ ಅವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದರೂ, ಇಂದಿಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು. ರೈತ ಮುಖಂಡ ಹೊಸಕೋಟೆ ಬಸವರಾಜು ಮಾತನಾಡಿ, ಸಂವಿಧಾನ ಪ್ರತಿಯೊಬ್ಬರಿಗೂ ಬದುಕುವ ಹಕ್ಕನ್ನು ನೀಡಿದೆ. ಆದರೆ ಚುನಾವಣೆ ಸಂದರ್ಭದಲ್ಲಿ ಮತ ಕೇಳಲು ಬರುವ ರಾಜಕಾರಣಿಗಳು, ನಂತರ ಜನರ ಸಮಸ್ಯೆಗಳನ್ನು ಆಲಿಸುವುದಿಲ್ಲ ಎಂದು ಟೀಕಿಸಿದರು. ರೈತರ ಬೇಡಿಕೆಗಳನ್ನು ನಿರ್ಲಕ್ಷಿಸಿದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ಈ ವೇಳೆ ಅರಣ್ಯ ಇಲಾಖೆ ಅಧಿಕಾರಿ ಶುಭಂ ಸಿಂಗ್ ಹಾಗೂ ತಹಶೀಲ್ದಾರ್ ತನ್ಮಯ್ ಭೇಟಿ ನೀಡಿ ರೈತರ ಸಮಸ್ಯೆ ಆಲಿಸಿದರು. ಈ ಸಂದರ್ಭದಲ್ಲಿ ರೈತ ಮುಖಂಡರಾದ ಕೆಂಪೂಗೌಡ, ಕೆ.ಮಲ್ಲಯ್ಯ, ಮಹೇಶ್ ಕುಮಾರ್, ನೇತ್ರಾವತಿ, ಹೊಸೂರು ಕುಮಾರ್, ವೆಂಕಟಚಲ, ಸೋಮಶೇಖರ್, ಮಹದೇವ್, ಮಲ್ಲಣ್ಣ, ಪಳನಿಸ್ವಾಮಿ, ಶಿವಣ್ಣ ಮಲ್ಲಯ್ಯನಪುರ, ಬಸಮ್ಮ, ಕನಕಮ್ಮ, ಶಿವಣ್ಣ ಮಲ್ಲಯ್ಯನಪುರ, ಕೋಡಹಳ್ಳಿ ಮಹದೇವಪ್ರಸಾದ್, ರಘು, ಪ್ರವೀಣ್ ಸೇರಿದಂತೆ ರೈತ ಪದಾಧಿಕಾರಿಗಳು, ವಿವಿಧ ಗ್ರಾಮಗಳ ಮುಖಂಡರು ಭಾಗವಹಿಸಿದ್ದರು.



## ಸಮುದಾಯ ಭವನಗಳ ಸದ್ಬಳಕೆಗೆ ಆದ್ಯತೆ ನೀಡಿ: ಶಾಸಕ

ಗುಂಡ್ಲುಪೇಟೆ: ಸಮುದಾಯ ಭವನಗಳನ್ನು ನಿರ್ಮಿಸುವುದಷ್ಟೇ ಮುಖ್ಯವಲ್ಲ, ಅವುಗಳನ್ನು ಸಮುದಾಯದ ಜನರು ಸದುಪಯೋಗಪಡಿಸಿಕೊಂಡು ಸಾಮಾಜಿಕ ಹಾಗೂ ಕೌಟುಂಬಿಕ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಬೇಕು ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ಹೇಳಿದರು.



ತಾಲೂಕಿನ ಕೋಡಿಹಳ್ಳಿ ಗ್ರಾಮದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2015-16ನೇ ಹಾಗೂ 2025-26ನೇ ಸಾಲಿನ ಯೋಜನೆಯಡಿ ಸಿಎಂಐಡಿಸಿ ಅನುದಾನದಲ್ಲಿ ನಿರ್ಮಿತಿ ಕೇಂದ್ರದ ಮೂಲಕ ನಿರ್ಮಿಸಲಾದ ಉಪ್ಪಾರ ಸಮುದಾಯ ಭವನವನ್ನು ಉದ್ಘಾಟಿಸಿ ಮಾತನಾಡಿದರು. ತಾವು ಶಾಸಕರಾದ ಬಳಿಕ ಕೋಡಿಹಳ್ಳಿ ಗ್ರಾಮದಲ್ಲಿ ?30 ಲಕ್ಷ ಅನುದಾನದಲ್ಲಿ ಸುಸಜ್ಜಿತ ಸಮುದಾಯ ಭವನ ನಿರ್ಮಾಣವಾಗಿದೆ. ಕಟ್ಟಡ ಉತ್ತಮವಾಗಿ ನಿರ್ಮಾಣಗೊಂಡಿದ್ದು, ಇದರ ಸದ್ಬಳಕೆಗೆ ಸಮುದಾಯದವರು ಮುಂದಾಗಬೇಕು. ತಾಲೂಕಿನಲ್ಲಿ ಈಗಾಗಲೇ ನಿರ್ಮಿಸಿರುವ ವಿವಿಧ ಸಮುದಾಯ ಭವನಗಳು ಯಾವ ರೀತಿಯಲ್ಲಿ ಬಳಕೆಯಾಗುತ್ತಿವೆ ಎಂಬುದನ್ನು ಪರಿಶೀಲಿಸಬೇಕಿದೆ. ಹೊಸ ಭವನಗಳ ನಿರ್ಮಾಣಕ್ಕೆ ಬೇಡಿಕೆ ಸಲ್ಲಿಸುವುದರ ಜೊತೆಗೆ, ಈಗಾಗಲೇ ನಿರ್ಮಿಸಿರುವ ಭವನಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದಕ್ಕೂ ಆದ್ಯತೆ ನೀಡಬೇಕು ಎಂದರು.

ಗ್ರಾಮಗಳಲ್ಲಿ ನಾಮಕರಣ ಸೇರಿದಂತೆ ವಿವಿಧ ಸಾಮಾಜಿಕ ಮತ್ತು ಕೌಟುಂಬಿಕ ಕಾರ್ಯಕ್ರಮಗಳನ್ನು ಸಮುದಾಯ ಭವನಗಳಲ್ಲಿ ಆಯೋಜಿಸುವುದರಿಂದ ಜನರಿಗೆ ಅನುಕೂಲವಾಗಲಿದೆ. ಉಪ್ಪಾರ ಸಮುದಾಯದ ಮುಖಂಡ ಚಿಕ್ಕರಾಜು ಅವರು ಸಮುದಾಯದ ಹಲವು ಬೇಡಿಕೆಗಳನ್ನು ಪ್ರಸ್ತಾಪಿಸಿದ್ದು, ಅವುಗಳನ್ನು ಹಂತ ಹಂತವಾಗಿ ಈಡೇರಿಸಲು ಸಹಕಾರ ನೀಡಲಾಗುವುದು. ಗ್ರಾಮದ ಶಾಲೆಗೆ ರಂಗಮಂದಿರ ನಿರ್ಮಿಸಿಕೊಡುವಂತೆ ಸಲ್ಲಿಸಿರುವ ಮನವಿಯ ಬಗ್ಗೆಯೂ ಗಮನ ಹರಿಸಲಾಗುವುದು ಎಂದು ಭರವಸೆ ನೀಡಿದರು.

### ನೀರು ಹರಿಸುವ ವಿಚಾರದಲ್ಲಿ ರಾಜಿಯಿಲ್ಲ

ತಾಲೂಕಿನ ಕೆರೆಗಳಿಗೆ ನೀರು ಹರಿಸುವ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. ನಾಲ್ಕನೇ ಹಂತದ ಕೆರೆಗಳಿಗೆ ನೀರು ಹರಿಸುವ ಕುರಿತು ಸಚಿವ ಪುಟ್ಟರಂಗಶೆಟ್ಟಿ ಅವರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಪೈಪ್ ಲೈನ್ ಮೂಲಕ ನೀರು ಹರಿಸಿದ್ದರೆ ಕೆಲವು ಸಮಸ್ಯೆಗಳನ್ನು ತಪ್ಪಿಸಬಹುದಿತ್ತು. ಆದರೆ, ಗ್ರಾವಿಟಿ ಮೂಲಕ ನೀರು ಹರಿಸುವ ಸಮಸ್ಯೆಗಳು ಎದುರಾಗುತ್ತಿವೆ ಎಂದು ತಿಳಿಸಿದರು. ಈಗಾಗಲೇ ಮೊದಲ ಮತ್ತು ಎರಡನೇ ಹಂತದ ಕೆರೆಗಳಿಗೆ ನೀರು ತುಂಬಿಸಲಾಗಿದೆ. ಮೂರನೇ ಹಂತದ ಪೂರ್ಣಗೊಂಡ ತಕ್ಷಣ ನಾಲ್ಕನೇ ಹಂತದ ಕೆರೆಗಳಿಗೂ ನೀರು ತುಂಬಿಸುವ ಕಾರ್ಯ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಪಿ. ರಾಜಶೇಖರ್, ಗ್ಯಾರಂಟಿ ಯೋಜನೆಗಳ ತಾಲೂಕು ಸಮಿತಿ ಅಧ್ಯಕ್ಷ ಉಮಾಪತಿ, ಹಾಪ್‌ಕಾಮ್ಸ್ ಉಪಾಧ್ಯಕ್ಷ ಚಿಕ್ಕರಾಜು, ಪಟೇಲ್ ನಾಗಶೆಟ್ಟಿ, ಯಜಮಾನ ಸ್ವಾಮಿ, ಜವರಶೆಟ್ಟಿ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಸೋಮು ಸೇರಿದಂತೆ ಹಿರಿಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಕುಮಾರಣ್ಣನಿಗೆ ನಿರಾಸೆ: ಪ್ರಿಯಾಂಕ್ ಖರ್ಗೆ ಟಾಂಗ್

ಬೆಂಗಳೂರು: ಕುಮಾರಣ್ಣ ಮತ್ತೆ ನಿರಾಸೆಯಲ್ಲಿದ್ದಾರೆ. ಪ್ರಧಾನ ಮಂತ್ರಿ ಮೋದಿ ಅವರು ತಮ್ಮನ್ನು ಕಡೆಗಣಿಸುತ್ತಿರುವುದರಿಂದ ವಿವಾದ ಸೃಷ್ಟಿಸುವುದೊಂದೇ ಅವರ ಕೆಲಸವಾಗಿದೆ ಎಂದು ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದ್ದಾರೆ.

ಎಚ್.ಡಿ.ಕುಮಾರಸ್ವಾಮಿ ಆರೋಪಗಳ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದ್ದಾರೆ. ಕಾಂಗ್ರೆಸ್ ಮತ್ತು ಸಿಜೆಪಿ ಚುನಾವಣಾ ಆಯೋಗವನ್ನು ಶುದ್ಧೀಕರಿಸಲು ಬಯಸುತ್ತವೆ ಎಂದು ನಾನು ಹೇಳಿದ್ದೇನೆ. ಅದಕ್ಕಾಗಿ ಕುಮಾರ್ ಅಣ್ಣ ಮತ್ತೆ ನಿರಾಸೆಗೊಂಡಿದ್ದಾರೆ ಎಂದು ಟೀಕಿಸಿದ್ದಾರೆ. ಕುಮಾರಣ್ಣ ಅವರ ಕುಟುಂಬದ ಎಂಟು ಮಂದಿ ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿರುವಾಗ, ನಾನು ನನ್ನ ಸ್ಥಾನವನ್ನು ಬಿಟ್ಟುಕೊಡಬೇಕೆಂದು ಅವರು ಬಯಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ. ನನ್ನ ಒಂದೇ ಒಂದು ಸ್ಥಾನ ಪಾಪವೇ? ಅವರ ಎಂಟು ಸ್ಥಾನಗಳು ಜನ್ಮಸಿದ್ಧ ಹಕ್ಕೇ? ಎಂದು ಪ್ರಶ್ನಿಸಿದ್ದಾರೆ.

## ಡಿಸಿ-ಎಸ್ಪಿ ಸೌಹಾರ್ದತೆ ಸಂದೇಶ

ಹಾಸನ: ಪರಸ್ಪರ ವಿವಾದದ ಕಾರಣಕ್ಕೆ ಸುದ್ದಿಯಾಗಿದ್ದ ಹಾಸನ ಜಿಲ್ಲಾಧಿಕಾರಿ ಲತಾಕುಮಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಈಗ ಒಂದಾಗಿ ಕಾಣಿಸಿಕೊಂಡಿದ್ದಾರೆ.

ಹಾಸನಾಂಬೆ ದರ್ಶನೋತ್ಸವ ಹಿನ್ನಲೆಯಲ್ಲಿ ಹಾಸನಾಂಬೆ ದೇವಾಲಯಕ್ಕೆ ಶುಕ್ರವಾರ ಒಟ್ಟಿಗೆ ಭೇಟಿ ನೀಡಿದ ಇಬ್ಬರೂ ಅಧಿಕಾರಿಗಳು ಪೂಜೆ ಸಲ್ಲಿಸಿ ಸೌಹಾರ್ದದ ಸಂದೇಶ ನೀಡಿದ್ದಾರೆ.

ಈ ವೇಳೆ ಡಿಸಿ, ಎಸ್‌ಪಿಗೆ ಹಾಸನಾಂಬೆ ದರ್ಶನೋತ್ಸವದ ವ್ಯವಸ್ಥೆಗಳು ಹಾಗೂ ಉತ್ಸವದ ಕುರಿತು ಮಾಹಿತಿ ಹಂಚಿಕೊಂಡರು.

ಇತ್ತೀಚಿನ ಬೆಳವಣಿಗೆಗಳ ಹಿನ್ನಲೆಯಲ್ಲಿ ಈ ಭೇಟಿ ಗಮನ ಸೆಳೆದಿದೆ. ಇನ್ನು ಮುಖ್ಯ ಕಾರ್ಯದರ್ಶಿ ಜೊತೆಗಿನ ಸಭೆಯ ಬಳಿಕ ಜಿಲ್ಲಾಧಿಕಾರಿ ಹಾಗೂ ಎಸ್ಪಿ ನಡುವಿನ ಮುನಿಸು ಸುಖಾಂತ್ಯ ಕಂಡಿತ್ತು.

## ಮಳೆ: ರೈತಪಾರು, ರಾಸು ಸಾವು

ಮೈಸೂರು: ನಿನ್ನೇ ರಾತ್ರಿ ಬಿದ್ದ ಮಳೆಗೆ ಕಳಸ್ತವಾಡಿ ಸಮೀಪ ವಿರಿಜಾ ನಾಲೆ ತುಂಬಿ ಹರಿದ ಪರಿಣಾಮ ಮುಂಜಾನೆ ಕಟಾವು ಕಬ್ಬು ಏರಲು ಹೋಗಿದ್ದ ರೈತನ ಎತ್ತಿನಗಾಡಿ ಮಗಚಿ ಉಲ್ಲಾಣಿ ಹಳ್ಳಕ್ಕೆ ಬಿದ್ದು ರೈತ ಪಾರಾಗಿ, ಎತ್ತುಗಳು ಸಾವನ್ನಪ್ಪಿದ ಘಟನೆ ನಡೆದಿದೆ.



ಮೈಸೂರು ತಾಲ್ಲೂಕಿನ ನಾಗನಹಳ್ಳಿ ಗ್ರಾಮದ ರೈತ ಚಂದ್ರು ಎಂಬುವವರೆ ಘಟನೆಯಲ್ಲಿ ಪರಾದ ರೈತನಾಗಿದ್ದಾರೆ. ಗಿರಿಜಾ ನಾಲೆಯ ಹೆಚ್ಚುವರಿ ನೀರನ್ನು ಬಿಡಲೆಂದು ಉಲ್ಲಾಣಿ ಓಣಿ ನಿರ್ಮಿಸಲಾಗಿದೆ. ಶುಕ್ರವಾರ ಮುಂಜಾನೆ ಎಂದಿನಂತೆ ಕಟಾವಿನ ಕಬ್ಬು ಏರಲು ಸದರಿ ಓಣಿಯಲ್ಲಿ ತೆರಳಿದ್ದಾರೆ. ಒಟ್ಟು ಮೂರು ಎತ್ತಿನಗಾಡಿ ತೆರಳಿದ್ದು, ಇದರಲ್ಲಿ ಎರಡು ಎತ್ತಿನಗಾಡಿ ಮುಂದೆ ಸಾಗಿದ್ದು, ಮೂರನೇ ಗಾಡಿ ತೆರಳುತ್ತಿದ್ದ ವೇಳೆ ಏಕಾಏಕಿ ನೀರಿನ ಹರಿವು ಹೆಚ್ಚಾಗಿ ಎತ್ತು ಹಾಗೂ ಗಾಡಿ ನೀರಿ ಹಳ್ಳಕ್ಕೆ ಬಿದ್ದಿವೆ. ಅದೃಷ್ಟವಶಾತ್ ರೈತ ಪಾರಾಗಿದ್ದು, ಎತ್ತುಗಳು ಸಾವನ್ನಪ್ಪಿದ್ದು, ಗಾಡಿ ಸಂಪೂರ್ಣ ಮುರಿದಿದೆ. ಈ ಸಂಬಂಧ ಸ್ಥಳಕ್ಕೆ ಆಗಮಿಸಿದ ಶಾಸಕ ಜಿ.ಟಿ.ದೇವೇಗೌಡ ರೈತನಿಗೆ ವೈಯುಕ್ತಿಕವಾಗಿ 50ಸಾವಿರ ರೂ. ಪರಿಹಾರ ನೀಡಿದರು.



ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಪ್ರಕೃತಿ ವಿಕೋಪದಡಿ ಪ್ರಕರಣ ದಾಖಲಿಸಿ ಸೂಕ್ತ ಪರಿಹಾರ ಕಲ್ಪಿಸಿಕೊಡುವುದಾಗಿ ತಿಳಿಸಿದ್ದಾರೆ.

ರೈತಮುಖಂಡ ನಾಗನಹಳ್ಳಿ ವಿಜಯೇಂದ್ರ ಮಾತನಾಡಿ, ಕಟಾವು ಕಬ್ಬು ಸರಬರಾಜು ಮಾಡುವುದನ್ನೇ ಜೀವವನ್ನಾಗಿಸಿಕೊಂಡಿರುವ ಆರು ಮಂದಿ ಅಣ್ಣ ತಮ್ಮಂದಿರ ಬಳಿಯೂ ಎತ್ತಿನಗಾಡಿಯಿತ್ತು. ಈ ಪೈಕಿ ಒಬ್ಬರ ದುರ್ಘಟನೆಯಿಂದ 2ಲಕ್ಷ 20ಸಾವಿರ ಮೌಲ್ಯದ ರಾಸು ಹಾಗೂ 2ಲಕ್ಷ ಮೌಲ್ಯದ ಎತ್ತಿನಗಾಡಿ ನಾಶವಾಗಿದೆ. ಸರ್ಕಾರ ಬಡ ರೈತನ ನೋವಿಗೆ ಸ್ಪಂದಿಸಲಿ ಎಂದು ಆಗ್ರಹಿಸಿದ್ದಾರೆ.

ಮೊದಲ ಪುಟದಿಂದ

## ಕಾಂಗ್ರೆಸ್ ಒಳಗೆಯೇ ಸಂಚು

ಪಕ್ಷದ ಆಂತರಿಕ ಸಂಘರ್ಷ ಹಾಗೂ ಖರ್ಗೆ ಕುಟುಂಬಕ್ಕೆ ಆದ ಅನ್ಯಾಯಕ್ಕೆ ಸೇಡು ತೀರಿಸಿಕೊಳ್ಳಲು ಪ್ರಿಯಾಂಕ್ ಖರ್ಗೆ ಈ ಜಾಲದಲ್ಲಿ ಭಾಗಿಯಾಗಿರುವ ಗುಮಾನಿ ಇದೆ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ. ಸ್ಟಿಂಗ್ ಆಪರೇಷನ್ ಬಿರುಗಾಳಿ ರಾಜ್ಯದ ಮಾನ ಮರ್ಯಾದೆಯನ್ನು ರಾಷ್ಟ್ರಮಟ್ಟದಲ್ಲಿ ಹರಾಜು ಹಾಕುವ ಬೆಳವಣಿಗೆಯಾಗಿದೆ. ಈ ವಿಷಯದಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿರುವಂತೆ 15 ಕೋಟಿಗೂ ಹೆಚ್ಚು ಹಣದ ವ್ಯವಹಾರ ನಡೆದಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

## ಸ್ವತಂತ್ರ ಆಯ್ಕೆ ಸಮಿತಿ ಅಗತ್ಯ

ತನಿಖೆಯು ಕೇವಲ ನಾಮಕಾವಸ್ಥೆಯಾಗಬಾರದು. ಸದಸ್ಯರ ನೇಮಕಾತಿಯಲ್ಲಿ ಪ್ರಾಮಾಣಿಕತೆ ಮತ್ತು ವೃತ್ತಿಪರ ಅರ್ಹತೆಗೆ ಆದ್ಯತೆ ನೀಡಬೇಕು. ಪ್ರಮುಖ ಶಿಕ್ಷಣ ಮತ್ತು ತಾಂತ್ರಿಕ ಸಂಸ್ಥೆಗಳ ತಜ್ಞರನ್ನು ಒಳ ಗೊಂಡ ಸ್ವತಂತ್ರ ಆಯ್ಕೆ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಸಲಹೆ ನೀಡಿದರು. ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವರ್ಗಾಯಿಸಿದ ಮಾತ್ರಕ್ಕೆ ಸಮಸ್ಯೆ ಬಗೆ ಹರಿಯುವುದಿಲ್ಲ. ಅಲ್ಲಿಯೂ ಇದೇ ರೀತಿಯ ಸಮಸ್ಯೆ ಗಳು ಎದುರಾಗಬಹುದು ಎಂದು ಅವರು ಎಚ್ಚರಿಸಿದರು.

## ಭೀಕರ ಅಪಘಾತ: ನಾಲ್ವರು ಸಾವು

ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ರವಾನಿಸಲಾಯಿತು. ಘಟನೆಯಿಂದಾಗಿ ಹೆದ್ದಾರಿ ವಾಹನ ಸಂಚಾರ ದಟ್ಟಣೆ ಉಂಟಾಯಿತು. ರಸ್ತೆಯುದ್ದಕ್ಕೂ ಒಂದು ಕಿ.ಮೀಗೂ ಹೆಚ್ಚು ದೂರ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ವಾಹನ ಸವಾರರು ಪರದಾಡುವಂತಾ ಯಿತು. ಬಳಿಕ ಕ್ರೇನ್ ಹಾಗೂ ಜೆಸಿಬಿ ಯಂತ್ರಗಳ ನೆರವಿನಿಂದ ಅಪಘಾತಕ್ಕೀಡಾದ ಬಸ್ ಮತ್ತು ಲಾರಿಯನ್ನು ರಸ್ತೆಯ ಬದಿಗೆ ಸ್ಥಳಾಂತರಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್ ಪಿ.ರವಿಕುಮಾರ್, ಇನ್ಸ್‌ಪೆಕ್ಟರ್ ಗೋವಿಂದರಾಜು ಭೇಟಿ ನೀಡಿ ಪರಿಶೀಲನೆ ನಡೆಸಿದರು.

## 'ಗ್ರೂಪ್ ಡಿ' ನೇಮಕಾತಿಯಲ್ಲೂ ಅಕ್ರಮ

**ಬೆಂಗಳೂರು:** ಹೈದರಾಬಾದ್-ಕರ್ನಾಟಕ ಕೇಡರ್ ಅಡಿಯಲ್ಲಿ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನೇಮಕಗೊಂಡಿದ್ದ 'ಗ್ರೂಪ್ ಡಿ' ವೃಂದದ 52 ನೌಕರರು, ನಕಲಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಗಳನ್ನು ಸಲ್ಲಿಸಿದ್ದಾರೆ ಎಂಬ ಆರೋಪದ ಮೇಲೆ ಅಮಾನತುಗೊಂಡಿದ್ದಾರೆ. ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಈ ಇಲಾಖೆಯು 2015ರ ಮಾರ್ಚ್‌ನಲ್ಲಿ 'ಗ್ರೂಪ್ ಡಿ' ನೌಕರರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿತ್ತು. ಅಭ್ಯರ್ಥಿಗಳ ಶೈಕ್ಷಣಿಕ ಅಂಕಗಳ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ನಡೆಯಬೇಕಿತ್ತು. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಗಳಿಸಿದ್ದ 230 ಅಂಕಗಳನ್ನು, ಅವರ ಅಂಕಪಟ್ಟಿಗಳಲ್ಲಿ 625ಕ್ಕೆ 586 ಅಂಕಗಳೆಂದು ಬದಲಾಯಿಸಿ ತೋರಿಸಲಾಗಿತ್ತು.

ಅದೇ ವರ್ಷ ನವೆಂಬರ್‌ನಲ್ಲಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಯಿತು. ಆದರೆ, ನೇಮಕಾತಿ ಆದೇಶಗಳನ್ನು 2016ರ ಜೂನ್‌ನಲ್ಲಿ ನೀಡಲಾಯಿತು.

2023ರಲ್ಲಿ ವ್ಯಕ್ತಿಯೊಬ್ಬರು ಇಲಾಖೆಗೆ ದೂರು ನೀಡಿದಾಗ, ಉದ್ಯೋಗ ಪಡೆಯಲು ಹಲವು ಅಭ್ಯರ್ಥಿಗಳು ನಕಲಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಗಳನ್ನು ಸಲ್ಲಿಸಿದ್ದಾರೆ ಎಂಬ ವಿಷಯ ಬೆಳಕಿಗೆ ಬಂದಿತು.

ಈ ನೌಕರರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಆರೋಪಿ ನೌಕರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಮತ್ತು ತನಿಖೆ ನಡೆಸಲು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

## ಕರ್ನಾಟಕ ಸರ್ಕಾರದಿಂದ ಸಿಜೆಪಿ ಪ್ರತಿಭಟನೆಗೆ ಹಣ

**ಬೆಂಗಳೂರು:** ದೆಹಲಿಯಲ್ಲಿ ನಡೆಯುತ್ತಿರುವ ಸಿಜೆಪಿ ಪ್ರತಿಭಟನೆಗೆ ಕರ್ನಾಟಕ ಸರ್ಕಾರದಿಂದಲೇ ಹಣ ರವಾನೆಯಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾಂಗ್ರೆಸ್ ಮತ್ತು ಸಿಜೆಪಿ ಎರಡೂ ಒಂದೇ ಎಂದು ಹೇಳಿ ದ್ದಾರೆ. ಏನು ಬೇಕಾದರೂ ಗಲಾಟೆ ಮಾಡಿ, ನಾವು ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಿಲ್ಲ ಎಂದು ಪರೋಕ್ಷವಾಗಿ ಪ್ರಚೋದನೆ ನೀಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ತಮ್ಮ ಪರವಾಗಿ, ತಮಗೆ ಅನುಕೂಲವಾಗುವಂತೆ ಕಾನೂನು ಕೈಗೆತ್ತಿಕೊಂಡು ಹೋರಾಟ ನಡೆಸಿದರೆ ಸರ್ಕಾರ ಯಾವುದೇ ಕ್ರಮ ಜರುಗಿಸುವುದಿಲ್ಲ ಎಂದು ಹೇಳುವ ಮೂಲಕ ಹೋರಾಟಗಾರರಿಗೆ ಯಾರೂ ಹೆದರಬೇಡಿ ಎಂದು ಅಭಯ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ವೈರಲ್ ಆಗಿರುವ ಪ್ರಿಯಾಂಕ್ ಖರ್ಗೆ ಅವರ ವಿಡಿಯೋವೊಂದನ್ನು ಪ್ರದರ್ಶಿಸಿ, ತಮ್ಮ ಪರವಾಗಿ ಹೋರಾಟ ನಡೆಸುವವರ ವಿರುದ್ಧ ಪೊಲೀಸರು ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಪ್ರಿಯಾಂಕ್ ಖರ್ಗೆ ಹೇಳಿರುವುದನ್ನು ಕುಮಾರಸ್ವಾಮಿ ಟೀಕಿಸಿ ದ್ದಾರೆ. ನೀವೇನು ಬೇಕಾದರೂ ಗಲಾಟೆ ಮಾಡಿ, ನಿಮ್ಮ ಮೇಲೆ ಪೊಲೀಸ್ ನವರು ಆಕ್ಷನ್ ತಗೊಳಲ್ಲ ಎಂದು ಸಿಜೆಪಿ ಪರ ಖರ್ಗೆ ಹೇಳಿಕೆ ನೀಡಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದರು. ಅಪ್ಪಾ, ಗೃಹ ಸಚಿವರೇ, ನಿಮ್ಮ ಹೇಳಿಕೆ ಇದು ಎಂದು ವಿಡಿಯೋ ಪ್ರದರ್ಶಿಸಿದ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು. ಅಲ್ಲದೆ,



ಸಿಜೆಪಿ ಚಟುವಟಿಕೆ ಗಳಿಗೆ ಫಂಡ್ಸ್ ಎಲ್ಲಾ ಇಲ್ಲಿಂದಲೇ ಹೋಗ್ತಾ ಇದೆ. ನಮ್ಮ ರಾಜ್ಯದ ಹಣವನ್ನ ಲೂಟಿ ಮಾಡಿ, ದೇಶ ದಲ್ಲಿ ಅಭದ್ರತೆ ಉಂಟುಮಾಡಲು ರವಾನಿಸಲಾಗುತ್ತಿದೆ ಎಂದು ಆರೋಪಿಸಿದರು. ಮುಖ್ಯಮಂತ್ರಿಗಳು ಪದೇ ಪದೇ ಕಾಲವೇ ಎಲ್ಲವನ್ನೂ ನಿರ್ಧಾರ ಮಾಡುತ್ತದೆ ಎಂದು ಹೇಳುತ್ತಿರುತ್ತಾರೆ. ಖಂಡಿತವಾಗಿಯೂ ಕಾಲವೇ ಎಲ್ಲವನ್ನೂ ನಿರ್ಧರಿಸಲಿದೆ. ಈ ಎಲ್ಲಾ ಅಕ್ರಮ ಮತ್ತು ಒಳಸಂಚುಗಳು ಸದ್ಯದಲ್ಲೇ ಜನರ ಮುಂದೆ ಬಯಲಾಗಲಿವೆ ಎಂದು ಸಿಎಂ ಡಿಕೆಶಿಗೆ ಎಚ್.ಡಿ. ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

ಸಿದ್ದಾರ್ಥ ಟ್ರಸ್ಟ್ ವಿಷಯದಲ್ಲಿ ಮೋದಿ ಹತ್ತಿರ ಮಲ್ಲಿಕಾರ್ಜುನ್ ಖರ್ಗೆ ಯಾಕೆ ಹೋಗಿದ್ದರು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಗೃಹ ಸಚಿ ವರ ಈ ಹೇಳಿಕೆಯು ಕಾನೂನು ಸುವ್ಯವಸ್ಥೆಯನ್ನು ದುರ್ಬಲಗೊಳಿಸುವ ಪ್ರಯತ್ನ ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

# ಕಾಡುಹಂದಿಗಳಿಗೆ ಹಂದಿ ಜ್ವರ

ಚಾಮರಾಜನಗರ, ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡುಹಂದಿಗಳಲ್ಲಿ ಆಫ್ರಿಕನ್ ಸ್ವೈನ್ ಫೀವರ್ ಪತ್ತೆಯಾಗಿದೆ. ಕಳೆದ ಎರಡು ದಿನಗಳಲ್ಲಿ ಎರಡು ಕಾಡುಹಂದಿಗಳು ಮೃತಪಟ್ಟಿವೆ. ಇದು ಸುತ್ತಮುತ್ತಲಿನ ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದ ಕಾಡಂಚಿನಲ್ಲಿ ಕೆಲವು ದಿನಗಳ ಹಿಂದೆ ಕಾಡುಹಂದಿಗಳು ಜ್ವರದಿಂದ ಸಾವಿಗೀಡಾಗಿದ್ದ ಘಟನೆ ನಡೆದಿತ್ತು. ಆದರೆ ಇತ್ತೀಚೆಗೆ ಗೋಪಾಲಸ್ವಾಮಿಬೆಟ್ಟ, ಕುಂದಕೆರೆ ವಲಯದ ಕಾಡಂಚಿನ ಬೂರದಾರಹುಂಡಿ, ಮಂಗಲ, ಜಕ್ಕಹಳ್ಳಿ, ಕಣಿಯನಪುರ ಭಾಗದಲ್ಲಿ ಕಾಡುಹಂದಿಗಳು ರಕ್ತವಾಂತಿ ಮಾಡಿಕೊಂಡು ಸಾವನ್ನಪ್ಪಿದ್ದವು. ಮೃತಪಟ್ಟಿದ್ದ ಕಾಡುಹಂದಿಯ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಆಫ್ರಿಕನ್ ಸ್ವೈನ್ ಫ್ಲೂನಿಂದ ಅಸುನೀಗಿರುವುದು ದೃಢವಾಗಿದೆ ಎಂದು ಜಿ.ಎಸ್.ಬೆಟ್ಟ ವಲಯ ಅರಣ್ಯಾಧಿಕಾರಿ ಕೆ.ಪಿ. ಸತೀಶ್ ಕುಮಾರ್ ಮಾಹಿತಿ ನೀಡಿದ್ದಾರೆ.

ಜಕ್ಕಳ್ಳಿ, ಮಂಗಲ ಇನ್ನಿತರ ಕಡೆ ಇರುವ ರೆಸಾರ್ಟ್ ಮತ್ತು ಹೋಂ ಸ್ಟೇಗಳಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಮಾಡುವಂತೆ ಸೂಚಿಸಲಾಗಿದೆ. ರೆಸಾರ್ಟ್?ನಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ತಿನ್ನಲು ಗುಂಪುಗುಂಪಾಗಿ ಕಾಡುಹಂದಿಗಳು ಬರುವ ಹಿನ್ನೆಲೆ ಒಂದರಿಂದ ಮತ್ತೊಂದಕ್ಕೆ ಹರಡುವ ಸಾಧ್ಯತೆ ಇರುವುದರಿಂದ ನಿರ್ದೇಶನ ನೀಡಲಾಗಿದೆ ಎಂದು ಜಿ.ಎಸ್. ಬೆಟ್ಟ ವಲಯ ಅರಣ್ಯಾಧಿಕಾರಿ ಕೆ.ಪಿ. ಸತೀಶ್ ಕುಮಾರ್ ತಿಳಿಸಿದರು. ಇನ್ನು, ಪಶು ಸಂಗೋಪನೆ ಇಲಾಖೆ ಉಪ ನಿರ್ದೇಶಕ ಡಾ. ಮಂಜುನಾಥ್ ಪ್ರತಿಕಿಯಿಸಿ, ಅರಣ್ಯ ಇಲಾಖೆ ವ್ಯಾಪ್ತಿ ಷೆಡ್ಯೂಲ್-2 ಕ್ಕೆ ಕಾಡುಹಂದಿಗಳು ಬರಲಿದ್ದು, ಅರಣ್ಯ ಇಲಾಖೆ ಇದುವರೆಗೆ ಈ ಬಗ್ಗೆ ಸಂವಹನ, ಮಾಹಿತಿ ನೀಡಿಲ್ಲ. ಕಾಡುಹಂದಿಗಳಿಂದ ಸಾಕುಹಂದಿಗಳಿಗೆ ಬರಲಿದ್ದು, ನಾಯಿ ಸೇರಿ ಇತರೆ ಪ್ರಾಣಿಗಳು, ಮನುಷ್ಯನಿಗೆ ಹರಡುವುದಿಲ್ಲ. ಈಗಾಗಲೇ ಜಿಲ್ಲೆಯ ಸಾಕುಹಂದಿಗಳಿಗೆ ಚುಚ್ಚುಮದ್ದುಗಳನ್ನು ನೀಡಲಾಗಿದೆ ಎಂದರು.

### ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ್

# ವಜಾಗೊಳಿಸುವಂತೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ: ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶಕುಮಾರ್ ಅವರನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಿ.ಜಿ.ಸಾಗರ ಬಣದ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಪ್ರಿಯದರ್ಶಿನಿ ಅವರ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿತರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ್ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತ ಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಿ.ಜಿ. ಸಾಗರ ಬಣದ ಜಿಲ್ಲಾ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಮಾತನಾಡಿ. ನಮ್ಮ ಸಂಘಟನೆ ವತಿಯಿಂದ ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಯುತ್ತಿದ್ದು, ಅದರಂತೆ ಸಂಘಟನೆಯ ರಾಜ್ಯಾಧ್ಯಕ್ಷ ಡಿ.ಜಿ.ಸಾಗರ ಅವರ ಆದೇಶದಂತೆ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶಕುಮಾರ್ ವಿರುದ್ಧ ಪ್ರತಿಭಟನೆ ನಡೆಸಲಾಗಿದೆ ಎಂದರು. ನೈಜ ಮತದಾರರನ್ನು ಪಟ್ಟಿಯಿಂದ ಕೈಬಿಟ್ಟಿರುವ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶಕುಮಾರ್ ಅವರನ್ನು ವಜಾಗೊಳಿಸಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಎಸ್ ಐಆರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು. ಮುಂಬರುವ ಚುನಾವಣೆಗಳನ್ನು ತಡೆಹಿಡಿಯಬೇಕು. 2023 ಚುನಾವಣಾ ಆಯೋಗದ ನೇಮಕಾತಿ ಕಾಯ್ದೆಯನ್ನು ರದ್ದುಗೊಳಿಸಬೇಕು. ಸ್ವತಂತ್ರ್ಯ ಮತ್ತು ವಿಶ್ವಾಸಾರ್ಹ ಆಯ್ಕೆ ಪ್ರಕ್ರಿಯೆಯನ್ನು ರೂಪಿಸಬೇಕು ಎಂದು ಸಿ.ಎಂ.ಶಿವಣ್ಣ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಿ.ಜಿ.ಸಾಗರ ಬಣದ ಜಿಲ್ಲಾ ಸಂಘಟನಾ ಸಂಚಾಲಕ ರಂಗಸ್ವಾಮಿ, ಜಿಲ್ಲಾ ಖಜಾಂಚಿ ರವಿಕುಮಾರ್, ನಗರ ಘಟಕ ಅಧ್ಯಕ್ಷ. ಆಟೋ, ಉಮೇಶ್ ಇತರರು ಭಾಗವಹಿಸಿದ್ದರು

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಯೋಗಕ್ಕೆ ವಯಸ್ಸಿನ ಮಿತಿಯಿಲ್ಲ: ಶಾಸಕ ಟಿ.ಎಸ್. ಶ್ರೀವತ್ಸ




ಮೈಸೂರು: ಯೋಗಕ್ಕೆ ಜಾತಿ, ಧರ್ಮ ಹಾಗೂ ವಯಸ್ಸಿನ ಯಾವುದೇ ಅಂತರವಿಲ್ಲ. ಯಾವುದೇ ವಯಸ್ಸಿನವರು ಬೇಕಾದರೂ ಯೋಗವನ್ನು ಮಾಡಬಹುದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದ ಪಿ.ಕಾಳಿಂಗ ರಾವ್ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮೈಸೂರಿನಲ್ಲಿ ಅನೇಕ ಯೋಗ ಬಂಧುಗಳು ಹಾಗೂ ಶಿಕ್ಷಕರು ಉಚಿತವಾಗಿ ಯೋಗವನ್ನು ಹೇಳಿಕೊಡುತ್ತಾ ಸಮಾಜವನ್ನು ಆರೋಗ್ಯವಂತರನ್ನಾಗಿ ಮಾಡಲು ಶ್ರಮಿಸುತ್ತಿದ್ದಾರೆ. ಸರ್ಕಾರವು ಅತ್ಯಂತ ಉತ್ತಮ ರೀತಿಯಲ್ಲಿ ದಸರಾ ಕಾರ್ಯಕ್ರಮದ ಮುಖಾಂತರ ಯೋಗವನ್ನು ಹಾಗೂ ಯೋಗದಸರವನ್ನು ಹಮ್ಮಿಕೊಂಡು, ಇದರ ಮುಖಾಂತರ ರಾಜ್ಯಮಟ್ಟದ ಸಂದೇಶವನ್ನು ನೀಡಲು ಆನ್‌ಲೈನ್ ರಿಜಿಸ್ಟ್ರೇಷನ್ ಮೂಲಕ ರಾಜ್ಯ ಮಟ್ಟದ ಸ್ಪರ್ಧೆಯನ್ನು ಆಯೋಜಿಸಿದೆ ಎಂದರು.

ಮೈಸೂರು ಎಂದರೇ ಅರಮನೆ, ಗುರುಮನೆ, ಯೋಗಮನೆ. ಮೈಸೂರು ನಗರವು ಯೋಗಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಪಡೆದಿದೆ. ರಾಜಾಶ್ರಯದಿಂದ ಹಿಡಿದು ಕಳೆದ 12 ವರ್ಷಗಳಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಯೋಗ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.

ಜೂನ್ 21ರಂದು ಮೈಸೂರಿನ ಅರಮನೆಯ ಮುಂಭಾಗ ಹಾಗೂ ಇಡೀ ಮೈಸೂರಿನಲ್ಲಿ ಸುಮಾರು 15,000ಕ್ಕೂ ಹೆಚ್ಚು ಜನ ಹಾಗೂ ಇಡೀ ಮೈಸೂರಿನ ವಿವಿಧ ಕಡೆಗಳಲ್ಲಿ ಸುಮಾರು 1 ಲಕ್ಷಕ್ಕೂ ಅಧಿಕ ಜನರು ಯೋಗವನ್ನು ಮಾಡುವ ಮೂಲಕ ದೊಡ್ಡ ಯಶಸ್ಸು ಕಂಡಿದೆ. ಮುಂಬರುವ 2027ರ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಗೆ ಇಡೀ ರಾಜ್ಯದಲ್ಲಿ 2 ಕೋಟಿ ಜನ ಯೋಗ ಮಾಡುವಂತೆ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದು ಹೇಳಿದರು.

ಯೋಗ ದಸರ ಉಪ ಸಮಿತಿ ಹಾಗೂ ಉಪ ವಿಶೇಷ ಅಧಿಕಾರಿ ಕೆ.ರಮ್ಯಾ ಮಾತನಾಡಿದರು. ಯೋಗ ದಸರಾ ಉಪಸಮಿತಿ ಆಯೋಜಿಸಿರುವ ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆಗೆ ಒಟ್ಟು 1,526 ಸ್ಪರ್ಧಿಗಳು ನೋಂದಾಯಿಸಿಕೊಂ ಡಿದ್ದರು. ನೋಂದಾಯಿತ ಒಟ್ಟು ಸ್ಪರ್ಧಿಗಳಲ್ಲಿ 851 ಮಹಿಳಾ ಹಾಗೂ 675 ಪುರುಷ (44.2% ಅಥವಾ ಸುಮಾರು 44%) ಇದ್ದರು. 93 ವಿಶೇಷ ಚೇತನ ಸ್ಪರ್ಧಿಗಳು ಭಾಗವಹಿಸಿದ್ದರು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯುಬ್ ಖಾನ್, ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರುದ್ರೇಶ್, ಕಾರ್ಯಾಧ್ಯಕ್ಷ ನಿರೂಪ್ ವೆಸ್ಲಿ, ಕಾರ್ಯದರ್ಶಿ ಡಾ.ಸಿ.ರೇಣುಕಾ ದೇವಿ, ಮೈಸೂರು ಯೋಗ ಕೂಟದ ಅಧ್ಯಕ್ಷ ರಮೇಶ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಪಶುಪತಿ ಮತ್ತಿತರರು ಉಪಸ್ಥಿತರಿದ್ದರು.

# ಯುವ ಜನಾಂಗದಲ್ಲಿ ಹೆಚ್ಚಾದ ಹೃದಯಾಘಾತ

## ಪತ್ರಕರ್ತರ ಆರೋಗ್ಯ ತಪಾಸಣಾ ಶಿಬಿರದಲ್ಲಿ ಡಾ. ಕೆ.ಎಸ್.ಸದಾನಂದ ಕಳವಳ



ಮೈಸೂರು: ನಾವು ಆರೋಗ್ಯವಾಗಿ ಇದ್ದೇವೆ ಎಂಬ ಭ್ರಮೆಯಿಂದ ಹೊರಬಂದು ಕಾಲಕಾಲಕ್ಕೆ ಆರೋಗ್ಯ ತಪಾಸಣೆಗೆ ಒಳಗಾಗುವುದರಿಂದ ಆರಂಭಿಕ ಹಂತದಲ್ಲಿ ಕಾಯಿಲೆಗಳನ್ನು ಪತ್ತೆ ಮಾಡಿ ಚಿಕಿತ್ಸೆ ಪಡೆದು ಅನಾಹುತಗಳಿಂದ ಪಾರಾಗಬಹುದು ಎಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಅಧೀಕ್ಷರಾದ ಡಾ. ಕೆ.ಎಸ್. ಸದಾನಂದ ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸದಸ್ಯ ಪತ್ರಕರ್ತರಿಗಾಗಿ ನಗರದ ಜಯದೇವ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಸಮಗ್ರ ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಹತ್ತು ಇಪ್ಪತ್ತು ವರ್ಷಗಳ ಹಿಂದೆ 50 ವರ್ಷ ಮೇಲ್ಪಟ್ಟವರಲ್ಲಿ ಕಾಣಿಸಿಕೊಳ್ಳುತ್ತಿದ್ದ ಹೃದ್ರೋಗ ಸಮಸ್ಯೆ ಪ್ರಸ್ತುತ ಜೀವನ ಶೈಲಿಯಿಂದಾಗಿ 20-30 ವರ್ಷದೊಳಗಿನ ಯುವಕ ಯುವತಿಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು ಆತಂಕದ ವಿಷಯ. ಇದಕ್ಕೆ ಬದಲಾದ ಆಹಾರ ಪದ್ಧತಿ, ಜೀವನ ಶೈಲಿ, ಒತ್ತಡದ ಬದುಕು ಪ್ರಮುಖ ಕಾರಣ ಎಂದು ತಿಳಿಸಿದರು.

ಜನರು ಮನೆಯೂಟ ಬಿಟ್ಟು ಹೊರಗಿನ ಆಹಾರವನ್ನು ಹೆಚ್ಚು ಆಶ್ರಯಿಸುತ್ತಿದ್ದಾರೆ. ಇದು ಎಲ್ಲ ರೋಗಗಳಿಗೆ ಮೂಲ ಕಾರಣ ಆದ್ದರಿಂದ, ಪ್ರತಿ ದಿನ ಕನಿಷ್ಠ 30 ನಿಮಿಷ ಕಾಲ್ನಡಿಗೆ, ವ್ಯಾಯಾಮ, ಪ್ರತಿ ದಿನ 7 ಗಂಟೆ ದೀರ್ಘ ನಿದ್ರೆ, ಕೆಟ್ಟ ಹವ್ಯಾಸಗಳಿಂದ ದೂರ ಉಳಿಯುವುದು ಬಹಳ ಮುಖ್ಯ ಎಂದು ಸಲಹೆ ನೀಡಿದರು.

ಪತ್ರಕರ್ತರ ವೃತ್ತಿಯೂ ಒತ್ತಡದ ವೃತ್ತಿಯಾಗಿದ್ದು ಸಕಾಲಕ್ಕೆ ಊಟ, ನಿದ್ರೆಯಿಲ್ಲದಂತೆ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಪತ್ರಕರ್ತರು ಕಾಲಕಾಲಕ್ಕೆ ಆರೋಗ್ಯ ತಪಾಸಣೆಗೆ ಒಳಗಾಗುವುದು ಉತ್ತಮ ಎಂದು ಕಿವಿಮಾತು ಹೇಳಿದರು.

ಇದಕ್ಕು ಮುನ್ನ ಮಾತನಾಡಿದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ವೃತ್ತಿಯ ಒತ್ತಡದಲ್ಲಿರುವ ಪತ್ರಕರ್ತರು ಆರೋಗ್ಯವನ್ನು ನಿರ್ಲಕ್ಷಿಸುತ್ತಿರುವುದರಿಂದ ಅನಾರೋಗ್ಯ ಪೀಡಿತ ಪತ್ರಕರ್ತರ ಸಂಖ್ಯೆ ಹೆಚ್ಚಾಗುತ್ತಿದೆ. ನಮ್ಮ ಪೆನ್ನು ಮತ್ತು ಆರೋಗ್ಯ ಗಟ್ಟಿಯಾಗಿ ಇರುವವರೆಗೂ ಜನ ಬರುತ್ತಾರೆ. ಆರೋಗ್ಯ ಕೈಕೊಟ್ಟು ಆಸ್ಪತ್ರೆಗೆ ಸೇರಿದಾಗ ನಮ್ಮ ಕುಟುಂಬ ಬಿಟ್ಟು ಯಾರೂ ಬರುವುದಿಲ್ಲ. ಈ ಸತ್ಯವನ್ನು ಅರ್ಥ ಮಾಡಿಕೊಂಡು ಆರೋಗ್ಯದ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದು ಮನವಿ ಮಾಡಿದರು. ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ವಾರ್ತಾ ಮತ್ತು ಸಂಪರ್ಕ ಇಲಾಖೆಗೆ ಉಪ ನಿರ್ದೇಶಕರಾದ ವಿನೋದ್ ಚಂದ್ರ, ಆಸ್ಪತ್ರೆಯ ವೈದ್ಯರಾದ ಡಾ. ಶಿಶಿರ್, ಡಾ. ಎಂ.ಪಶುಪತಿ, ಡಾ. ಶಾಂಭವಿ, ಡಾ.ರಶ್ಮಿ, ವೈದ್ಯ ಸಿಬ್ಬಂದಿಗಳಾದ ಉಮಾ, ಗುರುಮೂರ್ತಿ, ಐವಿ ಲೋಬೋ, ಸಾರ್ವಜನಿಕ ಸಂಪರ್ಕ ಅಧಿಕಾರಿಗಳಾದ ಪ್ರಿಯದರ್ಶಿನಿ, ವಾಣಿ, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಹಾಜರಿದ್ದರು. ಸುಮಾರು 140ಕ್ಕೂ ಹೆಚ್ಚು ಪತ್ರಕರ್ತರಿಗೆ ಬಿಪಿ, ಶುಗರ್, ಲಿಪಿಡ್ ಪ್ರೊಫೈಲ್, ರಕ್ತ ಪರೀಕ್ಷೆ ಇಸಿಜಿ, ಎಕೋ ಸೇರಿದಂತೆ ವಿವಿಧ ತಪಾಸಣೆ ನಡೆಯಿತು. ನಂತರ ವೈದ್ಯರ ಸಲಹೆಯನ್ನು ನೀಡಲಾಯಿತು.

> ಸದೃಢ ಸಮಾಜ ನಿರ್ಮಾಣದಲ್ಲಿ ಪತ್ರಕರ್ತರ ಪತ್ರ ಅಮೂಲ್ಯವಾದುದು. ಆದ್ದರಿಂದ ಪತ್ರಕರ್ತರು ಸದೃಢ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ವೃತ್ತಿಯ ಒತ್ತಡದಿಂದ ಹೊರಬರಲು ಉತ್ತಮ ಜೀವನ ಶೈಲಿಯನ್ನು ರೂಪಿಸಿಕೊಂಡು ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಕೊಳ್ಳಬೇಕು. ಬಡವರ ಆರೋಗ್ಯ ರಕ್ಷಣೆಯಲ್ಲಿ ಹಗಲಿರುಳು ಶ್ರಮಿಸುತ್ತಿರುವ ಜಯದೇವ ಆಸ್ಪತ್ರೆಯ ಬಗ್ಗೆ ನಕರಾತ್ಮಕ ದೃಷ್ಟಿಕೋನವನ್ನು ಹೊಂದಿರದೆ ವೈದ್ಯರಲ್ಲಿ ಆತ್ಮಬಲ ತುಂಬುವ ಕೆಲಸವನ್ನು ಪತ್ರಕರ್ತರು ಮಾಡಬೇಕು
>
> **ಡಾ. ದಿನೇಶ್**, ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು.

> ಮೈಸೂರು ಘಟಕದಲ್ಲಿ ಪ್ರತಿ ದಿನ 1 ಸಾವಿರ ಹೊರ ರೋಗಿಗಳು, 150 ಕ್ಕೂ ಹೆಚ್ಚು ತುರ್ಯು ಸೇವಾ ಚಿಕಿತ್ಸೆ ಪಡೆಯುತ್ತಿದ್ದಾರೆ. 60-70 ಮಂದಿ ಆಂಜಿಯೋಗ್ರಾಂ, ಆಂಜಿಯೋಪ್ಲಾಸ್ಟ್ ಶಸ್ತ್ರ ಚಿಕಿತ್ಸೆ ಒಳಗಾಗುತ್ತಾರೆ. 400 ಕ್ಕೂ ಹೆಚ್ಚು ಮಂದಿ ಎಕೋ ತಪಾಸಣೆಗೆ ಒಳಗಾಗುತ್ತಾರೆ. ಭಾರತದಲ್ಲಿಯೆ ಅತೀ ಹೆಚ್ಚು ಇಕೋ ಪರೀಕ್ಷೆ ನಡೆಸುವ ಆಸ್ಪತ್ರೆ ಜಯದೇವ ಆಸ್ಪತ್ರೆಯಾಗಿದೆ. ಇಂತಹ ಆಸ್ಪತ್ರೆಯ ಬಗ್ಗೆ ನಕರಾತ್ಮಕ ಸುದ್ದಿ ಮಾಡಿ ವೈದ್ಯರ ಆತ್ಮಸ್ಥೈರ್ಯ ಕುಗ್ಗಿಸಬೇಡಿ. ಜಯದೇವ ಬಗ್ಗೆ ಜನ ನಂಬಿಕೆ ಕಳೆದುಕೊಂಡರೆ ಬಡವರಿಗೆ ಅನ್ಯಾಯವಾಗಲಿದೆ.
>
> **ಡಾ.ಕೆ.ಎಸ್.ಸದಾನಂದ**, ಅಧೀಕ್ಷಕರು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ.

> ಪತ್ರಕರ್ತರು ಜನರ ಧ್ವನಿಯಾಗಬೇಕು, ಬಡವರ ಪರ ನಿಲ್ಲಬೇಕು ನಿಜ ಆದರೆ, ಮತ್ತೊಂದು ಬದಿಯಲ್ಲಿ ವಾಸ್ತವತೆಯ ರಿಯಾಲಿಟಿಯನ್ನು ಅರಿಯಬೇಕು. ಒಬ್ಬ ವೈದ್ಯ ದಿನಕ್ಕೆ ಎಷ್ಟು ರೋಗಿಯನ್ನು ತಪಾಸಣೆ ಮಾಡಬಹುದು. ಪ್ರತಿ ದಿನ ಸಾವಿರಾರು ರೋಗಿಗಳಿಗೆ ಚಿಕಿತ್ಸೆ ನೀಡುವಾಗ ಸಣ್ಣಪುಟ್ಟ ಲೋಪಗಳು ಸಂಭವಿಸುವುದು ಸಹಜ. ಅದನ್ನೆ ವೈಭವಿಕರಿಸಿ ಶ್ರೀ ಜಯದೇವ ಆಸ್ಪತ್ರೆಯ ಬಗ್ಗೆ ಜನರಲ್ಲಿ ನಂಬಿಕೆ ಕಳೆಯುವ ಕೆಲಸ ಮಾಡಬಾರದು. ಜನರಲ್ಲಿ ಭೀತಿ ಹುಟ್ಟಿಸುವ ಸುದ್ದಿಗಳಿಗೆ ಕಡಿವಾಣ ಹಾಕಬೇಕು.
>
> **ಕೆ.ದೀಪಕ್**, ಅಧ್ಯಕ್ಷ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ.



140ಕ್ಕೂ ಹೆಚ್ಚು ಪತ್ರಕರ್ತರಿಗೆ ಸಮಗ್ರ ಆರೋಗ್ಯ ತಪಾಸಣೆ



# ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಚಾಲನೆ



ಗುಂಡ್ಲುಪೇಟೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಚಾಮರಾಜನಗರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ವತಿಯಿಂದ ಗುಂಡ್ಲುಪೇಟೆಯಲ್ಲಿ 14 ಮತ್ತು 17 ವರ್ಷ ವಯೋಮಾನದ ಬಾಲಕ/ಬಾಲಕಿಯರ ಮೈಸೂರು ವಿಭಾಗ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಡಿ ದೇವರಾಜ ಅರಸು ಒಳಾಂಗಣ ಕ್ರೀಡಾಂಗಣದಲ್ಲಿ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ನಂತರ ಮಾತನಾಡಿದ ಶಾಸಕ ಗಣೇಶ್ ಪ್ರಸಾದ್ ನಮ್ಮ ತಾಲ್ಲೂಕಿನಲ್ಲಿ ಮೈಸೂರು ವಿಭಾಗೀಯ ಮಟ್ಟದ ಬಾಲಕ ಬಾಲಕೀಯರ ಬ್ಯಾಡ್ಮಿಂಟನ್ ಪಂದ್ಯಗಳು ನಡೆಯುತ್ತಿರುವುದು ಖುಷಿಯ ವಿಚಾರ ಎಂಟು ಜಿಲ್ಲೆಗಳ ಕ್ರೀಡಾಪಡುಗಳು ಗುಂಡ್ಲುಪೇಟೆಗೆ ಆಗಮಿಸಿ ಬ್ಯಾಡ್ಮಿಂಟನ್ ಆಡಳಿದ್ದು ಎಲ್ಲರಿಗೂ ಒಳ್ಳೆಯಾದಾಗಲಿ ಕ್ರೀಡೆ ಎಂದ ಮೇಲೆ ಸೋಲು ಗೆಲವು ಸಹಜ ಆಗಾಗಿ ಕ್ರೀಡೆ ಮಾನಸಿಕ ದೈಹಿಕ ಆರೋಗ್ಯವನ್ನು ವೃದ್ದಿಸುತ್ತದೆ ಎಂದರು. ಈ ಸಂದರ್ಭದಲ್ಲಿ ಉಪನಿರ್ದೇಶಕರು (ದೈಹಿಕ ಶಿಕ್ಷಣ) ಹಾಗೂ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ವಿಭಾಗದ ಶಂಕರ .ಆರ್ ಕ್ಷೇತ್ರ ಶಿಕ್ಷಣಾಧಿಕಾರಿಟಿ ಆರ್ ಸ್ವಾಮಿ ,ಸಹಾಯಕ ನಿದೇರ್ಶಕರು ಅಕ್ಷರ ದಾಸೋಹ ಕಾರ್ಯಕ್ರಮ ತಾ. ಪಂ ಸತೀಶ್ .ಕೆ.ಸಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಉಮಾಪತಿ, ನವೀದ್, ಪುರಸಭೆ ಮಾಜಿ ಸದಸ್ಯ ನಾ ಕುಮಾರ್, ಸೇರಿದಂತೆ ಮತ್ತಿತರರಿದ್ದರು.

# ಇಂದು ಕಾವೇರಿಗೆ ಆರತಿ



**ಸೋಮವಾರಪೇಟೆ:** ಕಾವೇರಿ ತೀರ್ಥೋದ್ಭವದಂದು ಕೊಡ್ಲಿಪೇಟೆಯಲ್ಲಿ ಕಾವೇರಿ ಆರತಿ ಹಾಗೂ ಬಾಗಿನ ಅರ್ಪಣೆ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾಜ್ಯ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಚಂದ್ರಮೌಳಿ ತಿಳಿಸಿದ್ದಾರೆ.

ಅಕ್ಟೋಬರ್ 17 ಅಪರಾಹ್ನ 3 ಗಂಟೆಯಿಂದ ಕೊಡ್ಲಿ ಪೇಟೆಯ ನಂದೀಪುರಕೆರೆ ಆವರಣದ ನೇಸರ ಉದ್ಯಾನದಲ್ಲಿ ಕಾರ್ಯಕ್ರಮಗಳು ಆರಂಭಗೊಳ್ಳಲಿದೆ. ಸಾಯಂಕಾಲ 4 ಗಂಟೆಗೆ ಬೆಂಗಳೂರಿನ ಹೆಸರಾಂತ ಅಂತರಂಗ ಬಹಿರಂಗ ನಾಟಕತಂಡದವರಿಂದ ಖ್ಯಾತ ರಂಗಕರ್ಮಿ ಭೀಷ್ಮ ರಾಮಯ್ಯ ನೇತೃತ್ವದಲ್ಲಿ ಭಾಯಿ ಬಡಕಿ ನಾಟಕ ಪ್ರದರ್ಶನ ನಡೆಯಲಿದೆ. ಸಂಜೆ 6 ಗಂಟೆಗೆ ಗಣಪತಿ ದೇವಾಲಯದಿಂದ ನಂದಿಧ್ವಜ, ಪೂರ್ಣಕುಂಭಗಳೊಂದಿಗೆ ಮೆರವಣಿಗೆ ನಡೆಯಲಿದ್ದು, 6.30 ಕ್ಕೆ ಚಿಕ್ಕಮಗಳೂರಿನ ಶ್ರೀ ದೇವಿ ಗುರುಕುಲದ ಮಾತೆಯರಿಂದ ರುದ್ರ ಪಠಣ ಹಾಗೂ ಭಜನೆ ನಡೆಯಲಿದೆ. ಯಜುರ್ವೇದ ಶ್ರೀ ಶರತ್ ಶಾಸ್ತ್ರಿ ಮತ್ತು ತಂಡದ ಕಾವೇರಿ ಆರತಿ ನಡೆಯಲಿದೆ ಎಂದು ತಿಳಿಸಿದ್ದಾರೆ. ರಾತ್ರಿ 7.55 ಕ್ಕೆ ಜರುಗುವ ಕಾವೇರಿ ತೀರ್ಥೋದ್ಭವ ಸಮಯದಲ್ಲಿ ನಂದಿಪುರ ಕೆರೆಗೆ ಬಾಗಿನ ಅರ್ಪಿಸಲಾಗುವುದು. ನಂತರ ಮಹಾಮಂಗಳಾರತಿ,ಪ್ರಸಾದ ವಿನಿಯೋಗ, ನಡೆಯಲಿದೆ ನಡೆಯಲಿದೆ.

## ಪುರಸಭಾ ಕಾರ್ಯಾಲಯ, ಸಕಲೇಶಪುರ

ದೂರವಾಣಿ ಸಂಖ್ಯೆ: 08173-244042 email: itstaff_ulb_sakleshpur@yahoo.com
Website: www.sakaleshpurtown.mrc.gov.in
ನಂ/ಮುನಿಸಿ/ಜೆ.ಇ/ಪಿಆರ್/01/2026-27 ದಿನಾಂಕ 12-10-2026

### ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಕಲೇಶಪುರ ಪುರಸಭೆ ಯಿಂದ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ-3 ನಿಯಮದಂತೆ ಇ-ಪೋರ್ಟಲ್ ಮೂಲಕ ಐಂಟವಾರು ಟೆಂಡರ್ ಕರೆಯಲಾಗಿದ್ದು ಆಸಕ್ತಿಯುಳ್ಳ ಗುತ್ತಿಗೆದಾರರು http://Kppp.karnataka.gov.inನಿಂದ ಟೆಂಡರ್ ಷರತ್ತು ಇಎಂಡಿ ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ಅನ್ನು ಸಲ್ಲಿಸುವ ಮತ್ತು ತೆರೆಯುವ ದಿನಾಂಕವನ್ನು ಇ-ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಸಕಲೇಶಪುರ ಪುರಸಭೆಯ ತಾಂತ್ರಿಕ ಶಾಖೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕ್ರ.ಸಂ.1.ಇಂಡೆಂಟ್ ನಂ DMA/2026-27/EL/WORK_INDENT 58640 ಅಂದಾಜು ಮೊತ್ತ (ಲಕ್ಷಗಳಲ್ಲಿ)31.50 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 21-10-2026 ಸಂಜೆ 5.30 ಗಂಟೆಗೆ ಸೂಚನೆ:- ಕಾರಣಾಂತರಗಳಿಂದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http://Kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-ಮುಖ್ಯಾಧಿಕಾರಿ,
ಪುರಸಭೆ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/621/ಕೆಎಸ್‌ಎಂಸಿಎ/2026-27

### ಸಿದ್ಧತೆಗೆ ಅಪರ ಜಿಲ್ಲಾಧಿಕಾರಿ ಸೂಚನೆ | ಕನ್ನಡ ರಾಜ್ಯೋತ್ಸವದ ಅಚ್ಚುಕಟ್ಟಾದ ಆಚರಣೆಗೆ ನಿರ್ದೇಶನ

# ಅರ್ಥಪೂರ್ಣ ರಾಜ್ಯೋತ್ಸವ, ವಾಲ್ಮೀಕಿ ಜಯಂತಿ ಆಚರಣೆ



ರಾಮನಗರ: 71ನೇ ಕನ್ನಡ ರಾಜ್ಯೋತ್ಸವವನ್ನು ನಗರದ ಬೆಂಗಳೂರು ದಕ್ಷಿಣ ಜಿಲ್ಲಾ ಕ್ರೀಡಾಂಗಣದಲ್ಲಿ ಯಾವುದೇ ಲೋಪಗಳಿಲ್ಲದಂತೆ ಅಚ್ಚುಕಟ್ಟಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಅವರು ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಕನ್ನಡ ಆಚರಣೆಯ ಕುರಿತು ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನವೆಂಬರ್ 1ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿ ಸಂದೇಶ ನೀಡಲಿದ್ದಾರೆ. ಅದಕ್ಕೂ ಮುನ್ನ ಸರ್ಕಾರದ ಎಲ್ಲಾ ಇಲಾಖೆಗಳ ಕಚೇರಿಗಳಲ್ಲಿ ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ನೆರವೇರಿಸಿ, ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಬೆಳಿಗ್ಗೆ 8:45ರ ಒಳಗೆ ಕ್ರೀಡಾಂಗಣದ ವೇದಿಕೆ ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಆಗಮಿಸಬೇಕು ಎಂದು ಅವರು ಸೂಚಿಸಿದರು.

### ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ವಾಲ್ಮೀಕಿ ಜಯಂತಿ ಆಚರಣೆ

ಅಕ್ಟೋಬರ್ 26ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಚರಿಸಲು ಹಾಗೂ ಮೆರವಣಿಗೆ ಕಾರ್ಯಕ್ರಮವನ್ನು ಆಯೋಜಿಸಲು ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರಸ್ತುತ ಕರ್ನಾಟಕ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ, ಯಾವುದೇ ರೀತಿಯಲ್ಲಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಕಾರ್ಯಕ್ರಮವನ್ನು ಆಯೋಜಿಸಬೇಕು. ಈ ಕಾರ್ಯಕ್ರಮದಲ್ಲಿ ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಡ್ಡಾಯವಾಗಿ ಭಾಗವಹಿಸುವಂತೆ ಅವರು ಸೂಚಿಸಿದರು. ಈ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಮೂಲಸೌಕರ್ಯ, ಭದ್ರತೆ, ಕಾರ್ಯಕ್ರಮಗಳ ವ್ಯವಸ್ಥೆ

ರಾಜ್ಯೋತ್ಸವ ಕಾರ್ಯಕ್ರಮಕ್ಕಾಗಿ ವೇದಿಕೆಯ ಸಿದ್ಧತೆ, ಆಸನಗಳ ವ್ಯವಸ್ಥೆ, ಆಮಂತ್ರಣ ಪತ್ರಿಕೆಗಳ ಮುದ್ರಣ ಹಾಗೂ ವಿತರಣೆ, ಬ್ಯಾನರ್, ಪುಷ್ಪಾಲಂಕಾರ, ಕ್ರೀಡಾಂಗಣದ ಸಮತಟ್ಟು ಹಾಗೂ ಸ್ವಚ್ಛತೆಯನ್ನು ಕಾಪಾಡಬೇಕು. ಜೊತೆಗೆ ಕುಡಿಯುವ ನೀರು, ನಿರಂತರ ವಿದ್ಯುತ್ ಪೂರೈಕೆ, ವಿದ್ಯುತ್ ಅಲಂಕಾರ, ರಾಷ್ಟ್ರಗೀತೆ, ವಂದೇ ಮಾತರಂ ಹಾಗೂ ನಾಡಗೀತೆ ಹಾಡಲು ಕಲಾವಿದರ ನಿಯೋಜನೆ ಮಾಡಬೇಕು. ಆರೋಗ್ಯ ಇಲಾಖೆ ವತಿಯಿಂದ ಆಂಬ್ಯುಲೆನ್ಸ್ ವ್ಯವಸ್ಥೆ, ಪೊಲೀಸರಿಂದ ಸೂಕ್ತ ಬಂದೋಬಸ್ತ್, ಪಥಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಸೇರಿದಂತೆ ಎಲ್ಲಾ ರೀತಿಯ ಅಗತ್ಯ ಸಿದ್ಧತೆಗಳನ್ನು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಅಚ್ಚುಕಟ್ಟಾಗಿ ನೆರವೇರಿಸುವಂತೆ ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

# ನೂತನ ಸಬ್ ಇನ್‌ಸ್ಪೆಕ್ಟರ್ ಆಗಿ ಎಚ್.ವಿ.ಸ್ವಾಮಿ ಅಧಿಕಾರ ಸ್ವೀಕಾರ



ಗುಂಡ್ಲುಪೇಟೆ: ಪಟ್ಟಣ ಪೊಲೀಸ್ ಠಾಣೆಗೆ ನೂತನ ಸಬ್ ಇನ್ಸ್ ಪೆಕ್ಟರ್ ಆಗಿ ಎಚ್.ವಿ. ಸ್ವಾಮಿ ಶುಕ್ರವಾರ ಅಧಿಕಾರ ಸ್ವೀಕಾರ ಮಾಡಿದರು.

ಈ ಹಿಂದೆ ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಆಗಿದ್ದ ನರೇಶ್ ಕುಮಾರ್.ಆರ್ ವರ್ಗಾವಣೆಯಿಂದ ತೆರವಾಗಿದ್ದ ಸ್ಥಾನಕ್ಕೆ ನೂತನ ಸಬ್ ಇನ್ಸ್ ಪೆಕ್ಟರ್ ಆಗಿ ನಿಯೋಜನೆಗೊಂಡಿದ್ದ ಎಚ್.ವಿ. ಸ್ವಾಮಿ ಶುಕ್ರವಾರ ಅಧಿಕಾರ ಸ್ವೀಕರಿಸಿದರು. ನೂತನ ಸಬ್ ಇನ್ಸ್ ಪೆಕ್ಟರ್ ಎಚ್.ವಿ.ಸ್ವಾಮಿ ಅವರಿಗೆ ಠಾಣೆ ವತಿಯಿಂದ ಸ್ವಾಗತ ಕೋರಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ

### ಅ. 17 ರಿಂದ 19ರವರೆಗೆ ಚಾಮರಾಜನಗರ ದಸರಾ
# ವೈವಿಧ್ಯಮಯ ಕಾರ್ಯಕ್ರಮಗಳು

ಚಾಮರಾಜನಗರ, ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವ ಕಾರ್ಯಕ್ರಮವನ್ನು ಅ. 17ರಿಂದ 19ರವರೆಗೆ ಆಯೋಜಿಸಲಾಗಿದೆ.

ಅಕ್ಟೋಬರ್ 17ರಂದು ಬೆಳಿಗ್ಗೆ 10.40 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯದ ಮೂಲಕ ದಸರಾ ಮಹೋತ್ಸವಕ್ಕೆ ಪಶುಸಂಗೋಪನೆ, ರೇ??ಮ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಚಾಲನೆ ನೀಡುವರು. ಸಂಜೆ 5.30 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಖ್ಯ ವೇದಿಕೆಯಲ್ಲಿ ಖ್ಯಾತ ಚಲನಚಿತ್ರ ನಟರಾದ ವಿ. ರವಿಚಂದ್ರನ್ ಅವರು ದಸರಾಗೆ ಚಾಲನೆ ನೀಡುವರು. ಪಶುಸಂಗೋಪನೆ, ರೇ??ಮ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶ್‌ಪ್ರಸಾದ್, ಎಂ.ಆರ್. ಮಂಜುನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ ಚಂದ್ರು, ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಅವರು ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಅಕ್ಟೋಬರ್ 17ರಂದು ಬೆಳಿಗ್ಗೆ 11 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದೆ. 11.30 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳ ಉದ್ಘಾಟನೆ ನೆರವೇರಲಿದೆ. ಬೆಳಿಗ್ಗೆ 11.45 ಗಂಟೆಗೆ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಮಹಿಳಾ ದಸರಾ ಕಾರ್ಯಕ್ರಮ, 12.30 ಗಂಟೆಗೆ ರಂಗೋಲಿ ಸ್ಪರ್ಧೆ, ಮಧ್ಯಾಹ್ನ 1 ಗಂಟೆಗೆ ಚಿತ್ರಕಲಾ ಪ್ರದರ್ಶನ ಉದ್ಘಾಟನೆಗೊಳ್ಳಲಿದೆ. ಮಧ್ಯಾಹ್ನ 2.30 ಗಂಟೆಗೆ ಜಿಲ್ಲಾಡಳಿತ ಭವನದಿಂದ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದವರೆಗೆ ವಿವಿಧ ಕಲಾ ತಂಡಗಳಿಂದ ಮತ್ತು ವಿವಿಧ ಇಲಾಖೆಗಳಿಂದ ಸ್ತಬ್ಧ ಚಿತ್ರಗಳ ಮೆರವಣಿಗೆ ನಡೆಯಲಿದೆ. ಸಂಜೆ 5.30 ಗಂಟೆಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದ ಮುಖ್ಯ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ಸಂಜೆ 6 ಗಂಟೆಗೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಅಕ್ಟೋಬರ್ 18ರಂದು ಬೆಳಿಗ್ಗೆ 6.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಆವರಣದ ಮುಂಭಾಗದಿಂದ ಮ್ಯಾರಥಾನ್ ಆರಂಭವಾಗಲಿದೆ. ಬೆಳಿಗ್ಗೆ 10 ಗಂಟೆಗೆ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕವಿಗೋಷ್ಠಿ ನಡೆಯಲಿದೆ. ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದ ಮುಖ್ಯ ವೇದಿಕೆಯಲ್ಲಿ ಬೆಳಿಗ್ಗೆ 10 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 4 ಗಂಟೆಗೆ ಯುವ ಸಂಭ್ರಮ ಹಾಗೂ ಸಂಜೆ 6 ರಿಂದ ರಾತ್ರಿ 9.45 ಗಂಟೆಯವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಅಕ್ಟೋಬರ್ 19ರಂದು ಬೆಳಿಗ್ಗೆ 6.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಆವರಣದಿಂದ ಪಾರಂಪರಿಕ ನಡಿಗೆ ಪ್ರಾರಂಭಗೊಳ್ಳಲಿದೆ. ಬೆಳಿಗ್ಗೆ 10 ರಿಂದ ಸಂಜೆ 6.30 ಗಂಟೆಯವರೆಗೆ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ..

# ಕಾರು-ಲಾರಿ ಮುಖಾಮುಖಿ ಡಿಕ್ಕಿ- ವಿಎಓ ಸ್ಥಳದಲ್ಲೇ ಸಾವು

ಚಾಮರಾಜನಗರ: ಕಾರು ಮತ್ತು ಲಾರಿ ಮುಖಾಮುಖಿ ಡಿಕ್ಕಿಯಾಗಿ ಗ್ರಾಮ ಆಡಳಿತಾಧಿಕಾರಿ ಸ್ಥಳದಲ್ಲೇ ಮೃತಪಟ್ಟ ಧಾರುಣ ಘಟನೆ ಚಾಮರಾಜನಗರ ತಾಲೂಕಿನ ಮಂಗಲ- ಮಾದಾಪುರ ರಸ್ತೆಯಲ್ಲಿ ನಡೆದಿದೆ.

ಚಾಮರಾಜನಗರ ನಿವಾಸಿ ಹಾಗೂ ಯಳಂದೂರು ತಾಲೂಕಿನ ಯರಿಯೂರು ವೃತ್ತದ ಗ್ರಾಮ ಆಡಳಿತಾಧಿಕಾರಿ ಮಹೇಶ್ ಮೃತರು. ಗ್ರಾಮ ಆಡಳಿತ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರು ಚಾಮರಾಜನಗರಕ್ಕೆ ಕಾರಿನಲ್ಲಿ ಬರುವಾಗ ಲಾರಿ ಮುಖಾಮುಖಿ ಡಿಕ್ಕಿಯಾಗಿದೆ. ಡಿಕ್ಕಿ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಮಹೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಂತೇಮರಹಳ್ಳಿ ಠಾಣೆ ಪೊಲೀಸರು ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ ಎರಡು ವಾಹನಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಗುಂಡ್ಲುಪೇಟೆ: ಕಾಡಾನೆ ಸೆರೆ



ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ ಅರಣ್ಯ ವಲಯ ವ್ಯಾಪ್ತಿಯಲ್ಲಿ ಇಬ್ಬರು ರೈತರನ್ನು ತುಳಿದು ಕೊಂದಿದ್ದ ಕಾಡಾನೆಯನ್ನು ಮೂರು ದಿನಗಳ ಸತತ ಕಾರ್ಯಾಚರಣೆ ಬಳಿಕ ಅರಣ್ಯ ಇಲಾಖೆ ಸಿಬ್ಬಂದಿ ಸೆರೆಹಿಡಿದಿದ್ದಾರೆ.

ಓಂಕಾರ ಅರಣ್ಯ ವಲಯದ ಕಾಡಿನಲ್ಲಿ ಇಬ್ಬರು ರೈತರ ಸಾವಿಗೆ ಕಾರಣವಾಗಿದ್ದ ಕಾಡಾನೆಯನ್ನು ಸೆರೆಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿ ಕಳೆದ ಮೂರು ದಿನಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದರು. ಶುಕ್ರವಾರ ನಾಗಣಾಪುರ ಅರಣ್ಯದ ಅಂಚಿನಲ್ಲಿ ಕಾಡಾನೆಯನ್ನು ಯಶಸ್ವಿಯಾಗಿ ಸೆರೆಹಿಡಿಯಲಾಗಿದೆ.

ಕಾಡಾನೆಯನ್ನು ಸೆರೆಹಿಡಿಯುವಲ್ಲಿ ಶ್ರಮಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ಕಾಡಾನೆಯನ್ನು ಸೆರೆಹಿಡಿಯಲು ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗೆ ಸ್ಥಳೀಯರು ಧನ್ಯವಾದ ತಿಳಿಸಿದ್ದಾರೆ.

# ಕಬ್ಬು ಬೆಳೆಗಾರರ ಪ್ರತಿಭಟನೆ



ಮೈಸೂರು: ಕಬ್ಬಿನ ಎಫ್ ಆರ್ ಪಿ ದರ ಏರಿಕೆ ಒತ್ತಾಯಿಸಿ ಮೈಸೂರು ಎಪಿಎಂಸಿ ಮುಂಭಾಗದಲಿ ಕಬ್ಬಿನ ಸೋಗಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿ ರೈತರ ಪ್ರತಿಭಟನೆ ನಡೆಸಲಾಯಿತು.

ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಕುರುಬೂರ್ ಶಾಂತಕುಮಾರ್ ಮಾತನಾಡಿ, ಕಬ್ಬು ಬೆಳೆಗಾರರ ಸಮಸ್ಯೆ ಆಲಿಸುವ ರಮೇಶ್ ಚಂದ್ ಸಮಿತಿಗೆ ರೈತರನ್ನ ಬಿಟ್ಟು ರಚಿಸಿರುವುದು ಸಮಂಜಸವಲ್ಲ. ಸಮಿತಿಗೆ ರೈತ ಪ್ರತಿನಿಧಿ ಇರಬೇಕು. ಇಲ್ಲದಿದ್ದರೆ ರೈತರಿಗೆ ನ್ಯಾಯ ಸಿಗುವುದಿಲ್ಲ. ಎಂದು ಆಕ್ರೋಶ ವ್ಯಕ್ತಪಡಿಸಲಾಯಿತು. ಕಬ್ಬಿನ ಎಫ್ ಆರ್ ಪಿ ದರ ಏರಿಕೆ ನಾಟಕ ಬೇಡ ಕೇಂದ್ರ ಕೃಷಿ ಬೆಲೆ ಆಯೋಗ ಪ್ರತಿವರ್ಷ ರಾಜ್ಯ ಸರ್ಕಾರಗಳಿಂದ ವರದಿ ಪಡೆಯುತ್ತದೆ ಇದರ ಅನ್ವಯ ಎಫ್ ಆರ್ ಪಿ ಏರಿಕೆ ಮಾಡಿ. ವಿಳಂಬ ಮಾಡಿದರೆ ರಾಜ್ಯದ ರೈತರ ಚಳುವಳಿಯ ಆಕ್ರೋಶಕ್ಕೆ ಗುರಿ ಆಗಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರಕ್ಕೆ ಎಚ್ಚರಿಸಿದು.

ಬರಗಾಲದ ಸಂಕಷ್ಟದಲ್ಲಿರುವ ರೈತರ ಕೃಷಿ ಸಾಲ ಮನ್ನಾ ಬಗ್ಗೆ ಬೆಂಗಳೂರಿನಲ್ಲಿ ರೈತರು ಪ್ರತಿಭಟನ ಧರಣಿ ಮಾಡಿದಾಗ ಒಂದು ವಾರದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರೈತ ಮುಖಂಡರ ಸಭೆ ಕರೆಯುವ ಭರವಸೆ ಸಚಿವ ಸತೀಶ್ ಜಾರಕಿಹೊಳಿ ನೀಡಿದ್ದಾರೆ. ಕಾದು ನೋಡುತ್ತೇವೆಂದರು. ಇಂದು ಎಪಿಎಂಸಿಯಲ್ಲಿ ಆವರಣದಲ್ಲಿ ಸಭೆ ನಡೆಸಿ ನಂತರ ಪ್ರತಿಭಟನೆ ನಡೆಸಲಾಯಿತು. ರೈತ ಮುಖಂಡರಾದ ಹತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ವರಕೂಡ್ ನಾಗೇಶ್, ಲಕ್ಷ್ಮಿಪುರ ವೆಂಕಟೇಶ್, ವಿಜೇಂದ್ರ ದೇವನೂರು, ಗೌರಿಶಂಕರ್, ನೀಲಕಂಠಪ್ಪ, ಲಕ್ಷ್ಮೀಪುರ ವೆಂಕಟೇಶ್, ವರಕೋಡು ನಾಗೇಶ್, ಕುರುಬೂರು ಸಿದ್ದೇಶ್, ಕೆಂಡಗಣಪ್ಪ, ಕುರುಬೂರು ಪ್ರದೀಪ್, ಪರ ಶಿವಮೂರ್ತಿ, ಗೌರಿಶಂಕರ್, ಪ್ರಸಾದ್ ನಾಯಕ, ಕಾಟೂರು ನಾಗೇಶ್, ಅಂಬಳೆ ಮಂಜುನಾಥ್, ಕೆಂಡಗಣ್ಣಸ್ವಾಮಿ, ನಂಜುಂಡಸ್ವಾಮಿ, ಗಿರೀಶ್, ಉಮೇಶ್, ರಂಗರಾಜು, ವಾಜಮಂಗಲ ನಾಗೇಂದ್ರ, ಮಹೇಶ್, ಶಿವಣ್ಣ, ಮಿಲಿಟರಿ ಕುಮಾರ್, ಕೂಡನಹಳ್ಳಿ ಸೋಮಣ್ಣ, ಸಿದ್ದರಾಜು, ಬಸವಣ್ಣ, ರಾಜು ಇತರರು ಇದ್ದರು.

# ವಾರದೊಳಗೆ ಸಮಗ್ರ ವರದಿ ನೀಡಿ
## ಬಂಡೀಪುರದಲ್ಲಿ ಹುಲಿ ಸಾವು, ಆನೆ ದಂತ ನಾಪತ್ತೆ: ಸಚಿವ ರಾಮಲಿಂಗಾರೆಡ್ಡಿ ಸೂಚನೆ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದಲ್ಲಿ ಹುಲಿ ಉರುಳಿಗೆ ಸಿಲುಕಿ ಮೃತಪಟ್ಟಿರುವುದು ಹಾಗೂ ಕರಡಿಕಲ್ಲು ಗುಡ್ಡ ಪ್ರದೇಶದಲ್ಲಿ ಕಾಡಾನೆಯ ದಂತ ನಾಪತ್ತೆಯಾಗಿರುವ ಪ್ರಕರಣಗಳನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ರಾಮಲಿಂಗಾರೆಡ್ಡಿ ಅವರು ಗಂಭೀರವಾಗಿ ಪರಿಗಣಿಸಿದ್ದಾರೆ.

ಈ ಘಟನೆಗಳ ಕುರಿತು ಸಮಗ್ರ ತನಿಖೆ ನಡೆಸಿ ಒಂದು ವಾರದೊಳಗೆ ವಿವರವಾದ ವರದಿ ಸಲ್ಲಿಸುವಂತೆ ಅವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಹುಲಿ ಸಂರಕ್ಷಿತ ಪ್ರದೇಶದೊಳಗೆ ನಡೆದಿರುವ ಈ ಎರಡೂ ಘಟನೆಗಳು ಅರಣ್ಯ ಇಲಾಖೆಯ ಗಸ್ತು ವ್ಯವಸ್ಥೆ, ಮೇಲ್ವಿಚಾರಣೆ ಹಾಗೂ ವನ್ಯಜೀವಿಗಳ ರಕ್ಷಣೆಯ ಕ್ರಮಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದ್ದು, ಇದು ಅತ್ಯಂತ ಆತಂಕಕಾರಿ ಸಂಗತಿಯಾಗಿದೆ ಎಂದು ಸಚಿವರು ತಿಳಿಸಿದ್ದಾರೆ.







### ವೈಜ್ಞಾನಿಕ ತನಿಖೆ ಹಾಗೂ ಸಾಕ್ಷ್ಯಾಧಾರಗಳ ಸಂಗ್ರಹ

**ಹುಲಿ ಉರುಳಿಗೆ ಸಿಲುಕಿ ಮೃತಪಟ್ಟಿದ್ದರ ಹಿಂದಿನ ನೈಜ ಕಾರಣಗಳು, ಉರುಳು ಅಳವಡಿಸಿದವರು ಯಾರು, ಕಾಡಾನೆಯ ದಂತಗಳು ಹೇಗೆ ನಾಪತ್ತೆಯಾಗಿವೆ ಹಾಗೂ ಈ ಪ್ರಕರಣಗಳಲ್ಲಿ ಕಳ್ಳಬೇಟೆಗಾರರ ಕೈವಾಡವಿದೆಯೇ ಎಂಬುದರ ಕುರಿತು ವೈಜ್ಞಾನಿಕ ಮತ್ತು ಸಾಕ್ಷ್ಯಾಧಾರಿತ ತನಿಖೆ ನಡೆಸಬೇಕು. ಎರಡೂ ಘಟನೆಗಳ ನಡುವೆ ಯಾವುದಾದರೂ ಸಂಬಂಧವಿದೆಯೇ ಎಂಬುದನ್ನೂ ಪರಿಶೀಲಿಸಬೇಕು ಎಂದು ಅವರು ಸೂಚಿಸಿದ್ದಾರೆ. ಘಟನಾ ಸ್ಥಳಗಳನ್ನು ಪರಿಶೀಲಿಸಿ, ಭೌತಿಕ ಸಾಕ್ಷ್ಯಗಳು, ಛಾಯಾಚಿತ್ರಗಳು, ಸಿಬ್ಬಂದಿಯ ಹೇಳಿಕೆಗಳು, ಗಸ್ತು ಪುಸ್ತಕಗಳು ಹಾಗೂ ಇತರ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಇದರೊಂದಿಗೆ ಮೃತದೇಹಗಳ ಮರಣೋತ್ತರ ಪರೀಕ್ಷೆ ಹಾಗೂ ಪ್ರಯೋಗಾಲಯ ಪರೀಕ್ಷೆ ಸೇರಿದಂತೆ ಸಂಬಂಧಿತ ವರದಿಗಳನ್ನು ಪಡೆದು ತನಿಖೆ ನಡೆಸುವಂತೆ ನಿರ್ದೇಶನ ನೀಡಿದ್ದಾರೆ.**

### ಅಧಿಕಾರಿಗಳ ಕರ್ತವ್ಯಲೋಪ ಪರಿಶೀಲನೆ ಹಾಗೂ ಶಿಸ್ತು ಕ್ರಮ

ಸಂಬಂಧಪಟ್ಟ ಅರಣ್ಯ ವಲಯಾಧಿಕಾರಿಗಳು, ಉಪ ವಲಯ ಅರಣ್ಯಾಧಿಕಾರಿಗಳು, ಬೀಟ್ ಸಿಬ್ಬಂದಿ ಹಾಗೂ ಮೇಲ್ವಿಚಾರಣಾ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕು. ಘಟನೆ ನಡೆದ ಪ್ರದೇಶದಲ್ಲಿ ಕೊನೆಯ ಬಾರಿ ಗಸ್ತು ನಡೆಸಿದ ದಿನಾಂಕ ಮತ್ತು ಸಮಯ, ಸಿಬ್ಬಂದಿಯ ನಿಯೋಜನೆ, ಗಸ್ತು ದಾಖಲೆಗಳು ಹಾಗೂ ಅಕ್ರಮ ಚಟುವಟಿಕೆಗಳ ಕುರಿತು ಹಿಂದೆಯೇ ಮಾಹಿತಿ ಲಭ್ಯವಿತ್ತೇ ಎಂಬುದನ್ನು ಪತ್ತೆಹಚ್ಚಬೇಕು. ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಅಥವಾ ಮೇಲ್ವಿಚಾರಣೆಯ ಕೊರತೆ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಯ ಜವಾಬ್ದಾರಿಯನ್ನು ನಿಗದಿಪಡಿಸಿ, ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಅವರು ಎಚ್ಚರಿಸಿದ್ದಾರೆ.

### ಅರಣ್ಯ ಪ್ರದೇಶಗಳಿಗೆ ಖುದ್ದು ಭೇಟಿ ಹಾಗೂ ಭದ್ರತೆ ಬಲಪಡಿಸಲು ಸೂಚನೆ

**ರಾಜ್ಯದ ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಡಿಸಿಎಫ್) ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಎಸಿಎಫ್) ತಮ್ಮ ವ್ಯಾಪ್ತಿಯ ಅರಣ್ಯ ಪ್ರದೇಶಗಳಿಗೆ ನಿಯಮಿತವಾಗಿ ಖುದ್ದು ಭೇಟಿ ನೀಡಿ ಗಸ್ತು ವ್ಯವಸ್ಥೆ, ಸಿಬ್ಬಂದಿಯ ಕರ್ತವ್ಯ ನಿರ್ವಹಣೆ, ವನ್ಯಜೀವಿಗಳ ಸುರಕ್ಷತೆ ಹಾಗೂ ಅಕ್ರಮ ಚಟುವಟಿಕೆಗಳ ನಿಯಂತ್ರಣದ ಕುರಿತು ಪರಿಶೀಲನೆ ನಡೆಸಬೇಕು ಎಂದು ಸಚಿವರು ನಿರ್ದೇಶಿಸಿದ್ದಾರೆ. ಹುಲಿ ಸಂರಕ್ಷಿತ ಪ್ರದೇಶಗಳು ಹಾಗೂ ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಗಸ್ತು ಮತ್ತು ಭದ್ರತಾ ವ್ಯವಸ್ಥೆಯನ್ನು ಬಲಪಡಿಸಬೇಕು. ಅಗತ್ಯವಿರುವ ಕಡೆಗಳಲ್ಲಿ ಗಸ್ತು ತಂಡಗಳನ್ನು ಹೆಚ್ಚಿಸುವುದು, ತಾಂತ್ರಿಕ ನಿಗಾ ಮತ್ತು ಸ್ಥಳೀಯ ಮಾಹಿತಿ ಸಂಗ್ರಹ ವ್ಯವಸ್ಥೆಯನ್ನು ಬಲ ಪಡಿಸುವ ಮೂಲಕ ಕಳ್ಳಬೇಟೆ ಹಾಗೂ ವನ್ಯಜೀ ವಿಗಳ ಅಂಗಾಂಗಗಳ ಅಕ್ರಮ ಸಾಗಣೆಯನ್ನು ತಡೆಗಟ್ಟಬೇಕು. ಈ ಪ್ರಕರಣಗಳ ತನಿಖೆಯ ಪ್ರಗತಿ, ಪತ್ತೆಯಾದ ಲೋಪಗಳು ಹಾಗೂ ರಾಜ್ಯದ ಎಲ್ಲಾ ಡಿಸಿಎಫ್ ಮತ್ತು ಎಸಿಎಫ್‌ಗಳು ಅರಣ್ಯ ಭದ್ರತೆ ಬಲಪಡಿಸಲು ಕೈಗೊಂಡ ಕ್ರಮಗಳ ವಿವರಗಳನ್ನೊಳಗೊಂಡ ಸಮಗ್ರ ವರದಿಯನ್ನು ಒಂದು ವಾರದೊಳಗೆ ಸಲ್ಲಿಸುವಂತೆ ಸಚಿವ ರಾಮಲಿಂಗಾರೆಡ್ಡಿ ಅವರು ಸೂಚಿಸಿದ್ದಾರೆ.**

# ಅಧಿಕಾರಿಗಳ ಗೈರಿಗೆ ಆಕ್ರೋಶ: ಅ.26ಕ್ಕೆ ವಾಲ್ಮೀಕಿ ಜಯಂತಿ



**ಗುಂಡ್ಲುಪೇಟೆ:** ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಅಕ್ಟೋಬರ್ 26ರಂದು ಪಟ್ಟಣದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲು ನಿರ್ಧರಿಸಲಾಗಿದೆ.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ತಹಶೀಲ್ದಾರ್ ತನ್ಮಯ್ ಅವರ ಅಧ್ಯಕ್ಷತೆಯಲ್ಲಿ ನಡೆದ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

### ಸಭೆಗೆ ಅಧಿಕಾರಿಗಳ ಗೈರುಹಾಜರಿ; ಮುಖಂಡರ ಆಕ್ರೋಶ

ಜಯಂತಿ ಆಚರಣೆಗೆ ಸಂಬಂಧಿಸಿದಂತೆ ನಡೆದ ಪೂರ್ವಭಾವಿ ಸಭೆಗೆ ಕೆಲವು ಅಧಿಕಾರಿಗಳು ಗೈರುಹಾಜರಾಗಿದ್ದರಿಂದ ವಾಲ್ಮೀಕಿ ಸಮುದಾಯದ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರಿ ಕಾರ್ಯಕ್ರಮದ ಪೂರ್ವಭಾವಿ ಸಭೆಗೆ ಅಧಿಕಾರಿಗಳು ಗೈರುಹಾಜರಾಗಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಮುಖಂಡರು, ಗೈರುಹಾಜರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು

ಈ ವೇಳೆ ತಹಶೀಲ್ದಾರ್ ತನ್ಮಯ್ ಅವರು ಮುಖಂಡರನ್ನು ಸಮಾಧಾನಪಡಿಸಿ, ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಸುವ ನಿಟ್ಟಿನಲ್ಲಿ ಸಹಕಾರ ನೀಡುವಂತೆ ಮನವಿ ಮಾಡಿದರು. ಬಳಿಕ ಮುಖಂಡರು ಜಯಂತಿ ಆಚರಣೆಗೆ ಒಪ್ಪಿಗೆ ಸೂಚಿಸಿದರು.

### ಗುರುಭವನದಲ್ಲಿ ಜಯಂತಿ ಆಚರಣೆ

ಸಭೆಯ ಅಂತಿಮ ನಿರ್ಧಾರದಂತೆ, ಅಕ್ಟೋಬರ್ 26ರಂದು ಗುಂಡ್ಲುಪೇಟೆ ಪಟ್ಟಣದ ಗುರುಭವನದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತದೆ. ಸಭೆಯಲ್ಲಿ ವಾಲ್ಮೀಕಿ ಸಮುದಾಯದ ಮುಖಂಡರಾದ ಬಂಗಾರ ನಾಯಕ, ನಾಗೇಂದ್ರ, ಶ್ರೀನಿವಾಸ್ ಕಣ್ಣಪ್ಪ, ನಾ. ಕುಮಾರ್, ಗೋವಿಂದನಾಯರ್, ಕಸ್ತೂರಿ ನ್ಯಾಯಪರ ವೇದಿಕೆಯ ಅಧ್ಯಕ್ಷ ಸ್ವಾಮಿ, ವೃಷಬೇಂದ್ರ ಹಂಗಳ, ಕಾರ್ಗಳ್ಳಿ ಸುರೇಶ್, ಚುಟುಕು ಮಾಧು, ರವಿ ಸೇರಿದಂತೆ ಉಪಸ್ಥಿತರಿದ್ದರು.

# ಗಮನ ಸೆಳೆದ ಶ್ವಾನ ಪ್ರದರ್ಶನ



ಚಾಮರಾಜನಗರದಲ್ಲಿ ಮುದ್ದು ಶ್ವಾನಗಳ ಪ್ರದರ್ಶನ ನೋಡುಗರ ಗಮನ ಸೆಳೆಯಿತು

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಜಿ.ಪಂ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮತ್ತು ಜಿಲ್ಲಾ ಹಾಲು ಒಕ್ಕೂಟ ಸಹಯೋಗದಲ್ಲಿ ದಸರಾ ಮಹೋ ತ್ಸವ ಅಂಗವಾಗಿ ಏರ್ಪಡಿಸಿದ್ದ ಶ್ವಾನ ಪ್ರದರ್ಶನದಲ್ಲಿ 50 ಕ್ಕೂ ಹೆಚ್ಚು ಶ್ವಾನ ತಳಿಗಳು ಭಾಗವಹಿಸಿ ವಿಶೇಷ ಪ್ರದರ್ಶನ ನೀಡಿ ಗಮನ ಸೆಳೆಯಿತು ಜರ್ಮನ್ ಶೆಫರ್ಡ, ರಾಟ್ ವಿಲರ್, ಲ್ಯಾಬ್ರಡಾರ್, ಕೇನ್ಕೋರ್ಸ್, ಅಮೆ ರಿಕನ್ ಬುಲ್ಲಿ, ಬಾಕ್ಸರ್, ಕಾಕರ್ ಸ್ಪ್ಯಾನಿಯಲ್, ಲ್ಹಾಸಪ್ಸಾ, ಗ್ರೇಡ್ಡೇನ್, ಪಮೆರಿಯನ್ ಹೀಗೆ ವಿವಿಧ ತಳಿಯ ಮುದ್ದು ನಾಯಿಗಳು ಎಲ್ಲರ ಗಮನ ಸೆಳೆಯುತ್ತಿವೆ.

ಮುದ್ದು ನಾಯಿಗಳ ಪ್ರದರ್ಶನಕ್ಕೆ ಚಾಲನೆ ನೀಡಿದ ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಮಾತನಾಡಿದರು.

ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು, ಪಶುಪಾಲನೆ ಇಲಾಖೆ ಉಪನಿರ್ದೇಶಕ ಡಾ.ಮಂಜುನಾಥ್ ,ಸಹಾಯಕ ನಿರ್ದೇಕರಾದ ಡಾ.ನಟರಾಜು, ಡಾ.ಮೂರ್ತಿ, ಡಾ..ಮಾದೇಶ್, ಡಾ.ಸಿದ್ದರಾಜು, ಡಾ.ಸಿಂಧು, ಡಾ.ಮನೋಹರ್, ಪಶು ವೈದ್ಯರು, ಸಿಬ್ಬಂದಿಗಳು ಹಾಜರಿದ್ದರು.

### ನಟ ಬಿ. ಸುರೇಶ್ ಅಭಿಮತ | ಪಾರಂಪರಿಕ ನಡಿಗೆಗೆ ಚಾಲನೆ ಹಾಗೂ ಮೈಸೂರಿನ ಇತಿಹಾಸದ ಮೆಲುಕು
# ಮೈಸೂರು ಪರಂಪರೆ ಉಳಿಸಿ, ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ

ಮೈಸೂರು: ಮೈಸೂರು ಎಂದರೆ ಕೇವಲ ಅರಮನೆಗಳ ನಗರವಲ್ಲ, ಬದಲಿಗೆ ಪರಂಪರೆಯನ್ನು ತೆರೆದಿಡುವಂತಹ ಸುಂದರ ಊರು. ಸಾಂಪ್ರದಾಯಿಕ ಕಟ್ಟಡಗಳು ಮತ್ತು ಇತಿಹಾಸವನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ ಎಂದು ಖ್ಯಾತ ನಟ ಹಾಗೂ ನಿರ್ದೇಶಕ ಬಿ. ಸುರೇಶ್ ಹೇಳಿದರು.

ರಂಗಚಾರ್ಲು ಪುರಭವನ ಆವರಣದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ ಆಯೋಜಿಸಿದ್ದ 'ಪಾರಂಪರಿಕ ನಡಿಗೆ' ಕಾರ್ಯಕ್ರಮಕ್ಕೆ ಹಸಿರು ಭಾವುಟ ತೋರಿಸುವ ಮೂಲಕ ಅವರು ಚಾಲನೆ ನೀಡಿದರು. ಮೈಸೂರಿನ ದಾಖಲೆಯಲ್ಲಿ ಈ ಊರಿಗೆ ಇರುಮ್ಮೈ ಊರು (ಎಮ್ಮೆಗಳ ಊರು) ಎಂದರ್ಥವಿತ್ತು. ಕಾಲಾಂತರದಲ್ಲಿ ಸಾಂಸ್ಕೃತೀಕರಣಗೊಂಡು ಇದು ಮಹೀಷಪುರ ಹಾಗೂ ಕಾಲಕ್ರಮೇಣ ಮೈಸೂರು ಆಗಿ ಬದಲಾಗಿರುವುದು ಒಂದು ದೊಡ್ಡ ಇತಿಹಾಸವಾಗಿದೆ. ದಿವಾನ್ ಶೇಷಾದ್ರಿ ಅಯ್ಯರ್ ಅವರು ಇಂಜಿನಿಯರ್ ಆಗಿ 1884ರಲ್ಲಿ ಈ ಕಟ್ಟಡ ನಿರ್ಮಾಣವನ್ನು ಆರಂಭಿಸಿದರು. ಯಾವುದೇ ತೊಂದರೆಯಿಲ್ಲದೆ 100 ವರ್ಷಗಳನ್ನು ಪೂರೈಸಿರುವ ಈ ಕಟ್ಟಡದ ಮುಂದೆ 1985ರ ವಿಶ್ವ ಕನ್ನಡ ಸಮ್ಮೇಳನದಲ್ಲಿ ತಾವೇ ನಾಟಕ ಪ್ರದರ್ಶನ ನೀಡಿರುವುದು ಸಂತೋಷದ ವಿಷಯ ಎಂದು ಅವರು ಸ್ಮರಿಸಿದರು.



### ಸಾಹಿತಿಗಳ ಮನೆ ಹಾಗೂ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಕರೆ

ಆರ್.ಕೆ. ನಾರಾಯಣ್, ಕುವೆಂಪು ಹಾಗೂ ತ.ರಾ.ಸು ಅವರಂತಹ ಹಿರಿಯ ಸಾಹಿತಿಗಳು ಮತ್ತು ಕಲಾವಿದರ ಮನೆಗಳನ್ನು ಹಾಗೂ ಪಾರಂಪರಿಕ ಕಟ್ಟಡಗಳ ಮೇಲೆ ಜೆಸಿಬಿಗಳ ಮತ್ತು ರಿಯಲ್ ಎಸ್ಟೇಟ್ ಕಣ್ಣು ಬೀಳದಂತೆ ಎಚ್ಚರಿಕೆ ವಹಿಸಿ ಸಂರಕ್ಷಿಸಬೇಕು. ಕೇವಲ ಪ್ರವಾಸೋದ್ಯಮವನ್ನು ಬೆಳೆಸುವುದು ಮಾತ್ರವಲ್ಲದೆ, ನಮ್ಮ ಪರಂಪರೆಯನ್ನು ಕಾಪಾಡುವುದು ಮುಖ್ಯ. ದಸರಾ ಹಿನ್ನೆಲೆಯಲ್ಲಿ ನಡೆಯುತ್ತಿರುವ ಈ ಪಾರಂಪರಿಕ ನಡಿಗೆಯು ಕೇವಲ ಮೈಸೂರಿನ ಪರಂಪರೆ ಮಾತ್ರವಲ್ಲ, ಇಡೀ ಕರ್ನಾಟಕದ ಇತಿಹಾಸವನ್ನು ಬಿಚ್ಚಿಡುವ ದೊಡ್ಡ ಕೆಲಸವಾಗಬೇಕು ಎಂದು ಅವರು ಆಶಿಸಿದರು.

### ಬಹುಮಾನ ವಿತರಣೆ

ಇದೇ ವೇಳೆ ಆಯೋಜಿಸಿದ್ದ 'ಮನೆಮನೆಯಲ್ಲಿ ಬೊಂಬೆ ಪ್ರದರ್ಶನ' ಸ್ಪರ್ಧೆಯಲ್ಲಿ ಗಜಲಕ್ಷ್ಮಿ ನಾಗರಾಜ್ ಪ್ರಥಮ, ಗೀತಾ ಶ್ರೀಹರಿ ದ್ವಿತೀಯ ಮತ್ತು ಸರಸ್ವತಿ ಕಿರಣ್ ತೃತೀಯ ಬಹುಮಾನ ಪಡೆದರು. 'ಸೆಲ್ಫಿ ವಿತ್ ಹೆರಿಟೇಜ್ ಬಿಲ್ಡಿಂಗ್' ಫೋಟೋ ಸ್ಪರ್ಧೆಯಲ್ಲಿ ಮೀನಾ ಕೃಷ್ಣ ಕುಮಾರ್ ಪ್ರಥಮ, ಅನುದಿತ ದ್ವಿತೀಯ ಮತ್ತು ಪುರುಷೋತ್ತಮ್ ಚಕ್ರವರ್ತಿ ತೃತೀಯ ಬಹುಮಾನ ಪಡೆದರು. ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪ ನಿರ್ದೇಶಕಿ ಡಾ.ಸಿ.ಎನ್.ಮಂಜುಳಾ, ಪುರಾತತ್ವ ಸಂರಕ್ಷಣಾ ಇಂಜಿನಿಯರ್‌ಳಾದ ಟಿ. ತಾರಕೇಶ್, ಕೆ.ಪಿ. ಗುರುಮಲ್ಲಪ್ಪ, ನಿವೃತ್ತ ಪ್ರಾಧ್ಯಾಪಕ ರಂಗರಾಜು, ಉಪನ್ಯಾಸಕ ಲ.ನ. ಸ್ವಾಮಿ ಸೇರಿದಂತೆ ಇತರರು ಭಾಗವಹಿಸಿದ್ದರು.

### 129ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳ ಗುರುತಿಸುವಿಕೆ

**ಪುರಾತತ್ವ ಮತ್ತು ಪರಂಪರೆ ಇಲಾಖೆಯ ಆಯುಕ್ತರಾದ ದೇವರಾಜು ಅವರು ಮಾತನಾಡಿ, ಮೈಸೂರು ನಗರವು ತನ್ನಲ್ಲಿ ಹಲವು ಪಾರಂಪರಿಕ ಕಟ್ಟಡಗಳನ್ನು ಹೊಂದಿದ್ದು, ಅವೆಲ್ಲವೂ ನಮ್ಮ ಸಂಸ್ಕೃತಿ ಮತ್ತು ಇತಿಹಾಸದ ಪ್ರತೀಕವಾಗಿವೆ. ಮೇಲ್ನೋಟಕ್ಕೆ ಇವು ಬೃಹತ್ ಕಟ್ಟಡಗಳಂತೆ ಕಂಡರೂ, ಅವುಗಳ ಹಿಂದೆ ದೊಡ್ಡ ಇತಿಹಾಸ, ವಾಸ್ತುಶಿಲ್ಪದ ವೈಶಿಷ್ಟ್ಯ, ನಿರ್ದಿಷ್ಟ ಶೈಲಿ ಹಾಗೂ ಕಾಲಘಟ್ಟದ ಹಿನ್ನೆಲೆ ಇದೆ. ಮೈಸೂರಿನಲ್ಲಿ ಈಗಾಗಲೇ ಸುಮಾರು 129ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳನ್ನು ಗುರುತಿಸಿ ಪಟ್ಟಿ ಮಾಡಲಾಗಿದೆ ಹಾಗೂ ಕೆಲವು ಆಯ್ದ ಕಟ್ಟಡಗಳ ಬಗ್ಗೆ ಬ್ರೋಷರ್ ಮೂಲಕ ಮಾಹಿತಿ ನೀಡಲಾಗಿದೆ ಎಂದು ವಿವರಿಸಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮುಖ್ಯಸ್ಥರಾದ ಪಿಳ್ಳೆ ಅಯ್ಯಂಗಾರ್ ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು.**

# ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನಡೆಗೆ ಮೈಷುಗರ್ ಅಧ್ಯಕ್ಷ ಸಿ.ಡಿಗಂಗಾಧರ್ ಖಂಡನೆ

## ವೈಯಕ್ತಿಕ ಟೀಕೆ, ತೇಜೋವಧೆ ಮಾಡುವುದನ್ನು ನಿಲ್ಲಿಸಿ ಸೈದ್ಧಾಂತಿಕ ರಾಜಕಾರಣ ಮಾಡಲಿ




**ಮಂಡ್ಯ:** ರಾಜಕೀಯದಲ್ಲಿ ಸೈದ್ಧಾಂತಿಕವಾಗಿ ವಿಮರ್ಶೆ ಮಾಡಬೇಕು ಹೊರತು ವೈಯಕ್ತಿಕವಾಗಿ ಅಸೂಯೆ ಸಾಧಿಸುವುದು, ಟೀಕೆ ಮಾಡುವುದು ಸರಿಯಲ್ಲ. ಕರ್ನಾಟಕದ ರಾಜಕಾರಣ ಒಂದು ಕಾಲದಲ್ಲಿ ಮೌಲ್ಯಾಧಾರಿತ ಭಾವನೆಗಳಿಂದ ಇಡೀ ದೇಶವೇ ತಿರುಗಿ ನೋಡುವಂತಿತ್ತು, ಆದರೆ ಇತ್ತೀಚಿನ ದಿನಗಳಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರು ವೈಯಕ್ತಿಕ ಟೀಕೆ ಮಾಡುವ ಮೂಲಕ ಸೈದ್ಧಾಂತಿಕ ರಾಜಕಾರಣಕ್ಕೆ ತಿಲಾಂಜಲಿ ಇಡುತ್ತಿದ್ದಾರೆ. ವೈಯಕ್ತಿಕ ಟೀಕೆ, ತೇಜೋವಧೆ ಮಾಡುವುದನ್ನು ನಿಲ್ಲಿಸಬೇಕು ಎಂದು ಮೈ ಶುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್ ತಿಳಿಸಿದರು.

ನಗರದ ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು.

ಕಳೆದ ಕೆಲವು ದಿನಗಳಿಂದ ಸೋಶಿಯಲ್ ಮೀಡಿಯಾದಲ್ಲಿ ಮತ್ತು ಕೆಲವೆಡೆ ಉದ್ದೇಶಪೂರ್ವಕವಾಗಿ ತೇಜೋವಧೆ ಮಾಡುವ ಕೆಲಸ ಅನಗತ್ಯವಾಗಿ ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.ಕರ್ನಾಟಕದ ರಾಜಕಾರಣದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರು ತಮ್ಮ ಜವಾಬ್ದಾರಿಯನ್ನು ಅರಿತು ಜನತೆಯ ಅಭಿವೃದ್ಧಿ ಹಿತದೃಷ್ಟಿಯಿಂದ ಮಾತನಾಡಬೇಕು. ಮಾನ್ಯ ಸಂಸದರಾದ ಕುಮಾರಸ್ವಾಮಿ ಅವರ ಬಗ್ಗೆ ಮೊನ್ನೆ ನಡೆದ ಚರ್ಚೆಯನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, ವಾಟ್ಸಾಪ್ ನಲ್ಲಿ ಬಂದಂತಹ ಒಂದು ಸಣ್ಣ ವಿಚಾರವನ್ನು ಇಟ್ಟುಕೊಂಡು ರಾಜ್ಯಕ್ಕೆ ಮಹಾನ್ ಸಮಸ್ಯೆ ಎಂಬಂತೆ ಬಿಂಬಿಸುವುದು ಸರಿಯಲ್ಲ ಎಂದರು.

ಜವಾಬ್ದಾರಿಯುತ ಕೇಂದ್ರ ಸಚಿವರಾದವರು ಇಲ್ಲಿಯವರೆಗೂ ಎರಡೂವರೆ ವರ್ಷದಲ್ಲಿ ಅವರ ಇಲಾಖೆಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮ ಮಾಡಿಲ್ಲ. ಅದನ್ನು ಬಿಟ್ಟು ಎಲ್ಲೋ ಯಾರೋ ಮಾಡಿದಂತಹ ವಿಚಾರಕ್ಕೆ ಸಂಬಂಧವೇ ಇಲ್ಲದವರು ಈಖಖ ಮಾಡಿ ಎಂದು ಕೇಳುತ್ತಿರುವುದು ಇದು ಅಸೂಯೆ ರಾಜಕಾರಣವಾಗಿದೆ. ದಯಮಾಡಿ ಕೇಂದ್ರ ಸಚಿವರು ಇದಕ್ಕೆ ತಿಲಾಂಜಲಿ ಇಟ್ಟು ಸೈದ್ಧಾಂತಿಕ ರಾಜಕಾರಣ ಮಾಡಬೇಕು ಎಂದು ಆಗ್ರಹಿಸಿದರು.ಸಿದ್ದರಾಮಯ್ಯನ 'ವರು ಆಡಳಿತ ಮಾಡಿದ ಸಂದರ್ಭದಲ್ಲಿ ಪ್ರತಿನಿತ್ಯ ಟೀಕೆ ಮಾಡುತ್ತಿದ್ದವರು, ಈಗ ಅವರು ಮಾಜಿ ಆದ ಸಂದರ್ಭದಲ್ಲಿ ಅವರನ್ನು ಓಲೈಸುವ ಮಾತುಗಳು ಬರುತ್ತಿವೆ. ರಾಜ್ಯದ ಜನತೆ ಇದೆಲ್ಲವನ್ನು ಗಮನಿಸುತ್ತಿದ್ದಾರೆ ಎಂದು ಹೇಳಿದರು.

ಪೂಜ್ಯ ಮಾಜಿ ಪ್ರಧಾನಿ ದೇವೇಗೌಡರವರು ತಮ್ಮ ರಾಜಕೀಯ ಜೀವನದಲ್ಲಿ ಯಾರ ವಿರುದ್ಧವೂ ವೈಯಕ್ತಿಕ ಟೀಕೆ ಮಾಡದೇ ಸೈದ್ಧಾಂತಿಕವಾಗಿ ನಡೆದಿರುವುದನ್ನು ಕುಮಾರಸ್ವಾಮಿ ರವರು ಮೊದಲು ಕಲಿಯಬೇಕು ಎಂದರು.

ವೈಯಕ್ತಿಕವಾಗಿ ನೋವಾದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೂರು ಕೊಡುವ ಮೂಲಕ ನ್ಯಾಯ ಪಡೆಯುವುದು ಸಾಂವಿಧಾನಿಕ ಹಕ್ಕು. ಅದನ್ನು ಬಿಟ್ಟು ಯಾರೋ ಮಾತನಾಡುತ್ತಿರುವುದನ್ನು ಕೇಳಿ ಅವರ ಮೇಲೆ ಎಫ್ಐಆರ್ ಮಾಡಲು ಒತ್ತಾಯಿಸುವುದು ಅಸೂಯೆಯಾಗಿದೆ ಎಂದರು.

ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಪ್ರಿಯಾಂಕ್ ಖರ್ಗೆ ರವರ ಮೇಲೆ ದಾಳಿ ಮಾಡುತ್ತಿರುವ ಕುಮಾರಸ್ವಾಮಿ ರವರ ದಲಿತ ವಿರೋಧಿ ನೀತಿಯನ್ನು ಖಂಡಿಸುತ್ತೇವೆ. ಬುದ್ಧ, ಬಸವ, ಅಂಬೇಡ್ಕರ್ ಆದರ್ಶ ಮೈಗೂಡಿಸಿಕೊಂಡು ದಕ್ಷತೆಯಿಂದ ಕೆಲಸ ಮಾಡುತ್ತಿರುವ ಪ್ರಿಯಾಂಕ್ ಖರ್ಗೆ ರವರ ಜ್ಞಾನ, ವಾಕ್ ಚಾತುರ್ಯತೆ, ಜನಪ್ರಿಯತೆ ಸಹಿಸಲಾರದೇ "ಗೃಹ ಇಲಾಖೆ ನಿಮ್ಮಪ್ಪಂದ" ಎಂದು ಧಮ್ಕಿ ಹಾಕುವ ಮೂಲಕ ಕಾನೂನು ಸುವ್ಯವಸ್ಥೆ ಹಾಳು ಮಾಡುತ್ತಿದ್ದಾರೆ ಎಂದರು.

ಒಕ್ಕಲಿಗ ಸಮುದಾಯದ ಡಿ.ಕೆ. ಶಿವಕುಮಾರ್ ರವರು ಮುಖ್ಯಮಂತ್ರಿಯಾಗಿರುವುದನ್ನು ಸಹಿಸದೇ, ದಲಿತ ಸಮುದಾಯದ ಪ್ರಿಯಾಂಕ್ ಖರ್ಗೆ ಗೃಹ ಸಚಿವರಾಗಿರುವುದನ್ನು ಸಹಿಸದೇ, ಕೇಂದ್ರ ಸಚಿವರಾಗಿ ರಾಜ್ಯಕ್ಕೆ ವಿಶೇಷ ಅನುದಾನ, ಕೈಗಾರಿಕೆ, ಜಿ.ಎಸ್.ಟಿ ಪಾಲು ತರಲಾಗದೇ, ರೈತರ ಕಬ್ಬಿನ ಬೆಲೆ ಬಗ್ಗೆ ಧ್ವನಿ ಎತ್ತದೇ ಅನಾವಶ್ಯಕವಾಗಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಚಲುವರಾಯಸ್ವಾಮಿ, ಬಾಲಕೃಷ್ಣ ರವರನ್ನು ಬೈಯ್ಯುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ ಎಂದರು.

ಮಂಡ್ಯ ಜಿಲ್ಲೆಯ ಜನ ಹೆಚ್ಚಿನ ಮತ ನೀಡಿ ಗೆಲ್ಲಿಸಿದ್ದರೂ ಜಿಲ್ಲೆಗೆ ಯಾವುದೇ ವಿಶೇಷ ಅನುದಾನ, ಕೈಗಾರಿಕೆ ತರದೇ ರಾಜ್ಯ ಸರ್ಕಾರದ ವಿರುದ್ಧ ಟೀಕೆ ಮಾಡುತ್ತಾ ಕಾಲಹರಣ ಮಾಡುತ್ತಿರುವ ಇವರು ನಿರುದ್ಯೋಗ ಮಂತ್ರಿಯಂತೆ ಕಾಣುತ್ತಾರೆ. ಇವರ ಇಂತಹ ವೈಯಕ್ತಿಕ ದಾಳಿಗಳನ್ನು ಪ್ರಬುದ್ಧ ನಾಗರಿಕರು ಸಹಿಸುವುದಿಲ್ಲ. ದಲಿತ ಮತ್ತು ಪ್ರಗತಿಪರ ಸಂಘಟನೆಗಳ ವತಿಯಿಂದ ದಿನಾಂಕ ಅ.17 ರ ರಂದು ಸಂಜಯ ವೃತ್ತದಲ್ಲಿ ಕುಮಾರಸ್ವಾಮಿ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಸಿ.ಎಂ.ದ್ಯಾವಪ್ಪ, ಸುಂಡಹಳ್ಳಿ ಮಂಜುನಾಥ್, ವಿಜಯಲಕ್ಷ್ಮಿ ರಘುನಂದನ್, ಎಲ್.ಕೃಷ್ಣ, ಉದಯ್, ಪಾಂಡೆ ಇದ್ದರು.

## ಮಹಿಳಾ–ಮಕ್ಕಳ ದಸರಾ : ವಿವಿಧ ಸ್ಪರ್ಧಾ ಕಾರ್ಯಕ್ರಮ

**ತುಮಕೂರು:** ತುಮಕೂರು ದಸರಾ–2026ರ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅಕ್ಟೋಬರ್ 15ರಂದು ಮಕ್ಕಳ ದಸರಾ ಮತ್ತು ಅಕ್ಟೋಬರ್ 17ರಂದು ಮಹಿಳಾ ದಸರಾ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಮಹಿಳೆಯರು ಹಾಗೂ ಮಕ್ಕಳಿಗಾಗಿ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಮಕ್ಕಳ ದಸರಾ ಅಂಗವಾಗಿ ಅಕ್ಟೋಬರ್ 15ರಂದು ಬೆಳಗ್ಗೆ 10 ಗಂಟೆಗೆ ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ 5 ರಿಂದ 10ನೇ ತರಗತಿ ಮಕ್ಕಳಿಗಾಗಿ ಚಿತ್ರಕಲೆ ಹಾಗೂ ಕಸದಿಂದ ಕಲೆ(ವೇಸ್ಟ್ ಟು ಆರ್ಟ್), ಮಧ್ಯಾಹ್ನ 12 ಗಂಟೆಗೆ ಬ್ಯಾಲೆನ್ಸ್ ದ ಬುಕ್, ವಾಟರ್ ಗೇಮ್, ಫ್ರಾಗ್ ಜಂಪ್ ರೇಸ್, ಹಗ್ಗ–ಜಗ್ಗಾಟ, ಗೋಣಿ ಚೀಲದ ಓಟ, ಬಲೂನ್ ಬ್ಯಾಲೆನ್ಸ್ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಸಂಜೆ 6 ಗಂಟೆಗೆ ತಾಯಿ ಮತ್ತು ಮಗು(6 ವರ್ಷದೊಳಗಿನ)ವಿನ ಸಾಂಪ್ರದಾಯಿಕ ಉಡುಗೆ ವೇಷಭೂಷಣ(ಫ್ಯಾಷನ್ ಶೋ) ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಮಹಿಳಾ ದಸರಾ ಅಂಗವಾಗಿ ಅಕ್ಟೋಬರ್ 17ರಂದು ಬೆಳಗ್ಗೆ 6.30 ಗಂಟೆಗೆ ನಗರದ ಮಹಾತ್ಮಗಾಂಧಿ ಕ್ರೀಡಾಂಗಣ ರಸ್ತೆಯಲ್ಲಿ 18 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಚುಕ್ಕಿ ರಂಗೋಲಿ ಮತ್ತು ಎಳೆ ರಂಗೋಲಿ ಸ್ಪರ್ಧೆ, ಬೆಳಗ್ಗೆ 10 ಗಂಟೆಗೆ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಮಹಿಳೆಯರಿಗಾಗಿ ಬಲೂನು ರೇಸ್, ಲೆಗ್ ಟೈಡ್ ರೇಸ್(ಜೋಡಿ), ಮ್ಯೂಸಿಕಲ್ ಛೇರ್, ಹೂ ಕಟ್ಟುವುದು, ಹಗ್ಗ–ಜಗ್ಗಾಟ(ತಂಡ) ಹಾಗೂ ಮಧ್ಯಾಹ್ನ 3 ಗಂಟೆಗೆ ಬಿ.ಜಿ.ಎಸ್. ವೃತ್ತದಿಂದ ತುಮಕೂರು ನಗರದ ಪ್ರಮುಖ ರಸ್ತೆಗಳಲ್ಲಿ ಮಹಿಳೆಯರಿಂದ ಬೈಕ್ ರೈಡಿಂಗ್ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಲಭವನ, ಎಂ.ಜಿ.ರಸ್ತೆ, ತುಮಕೂರು ಇವರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಉಪನಿರ್ದೇಶಕ ಡಾ: ಸಿದ್ದರಾಮಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆ.ಆರ್. ನಗರದಲ್ಲಿ ವಿಶ್ವ ಅರಿವಳಿಕೆ ದಿನಾಚರಣೆ

## ಅರಿವಳಿಕೆ ತಜ್ಞ ವೈದ್ಯರು ವೈದ್ಯಕೀಯ ಲೋಕದ ತೆರೆಮರೆಯ ನಾಯಕರು: ಡಾ. ಸಂತೋಷ್




**ಕೆ.ಆರ್.ನಗರ:** ವೈದ್ಯಕೀಯ ಲೋಕದ ತೆರೆಮರೆಯ ನಾಯಕರು ಅರಿವಳಿಕೆ ತಜ್ಞ ವೈದ್ಯರು ಎಂದು ತಾಲೂಕು ಆರೋಗ್ಯ ಅಧಿಕಾರಿ ಡಾ.ಸಂತೋಷ್ ಹೇಳಿದರು.

ಅವರು ಪಟ್ಟಣದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ವಿಶ್ವ ಅರಿವಳಿಕೆ ದಿನ ಹಾಗೂ ಅರಿವಳಿಕೆ ತಜ್ಞ ವೈದ್ಯರುಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಮ್ಮ ಮಧ್ಯೆ ಇದ್ದುಕೊಂಡು ಅಸಂಖ್ಯಾತ ರೋಗಿಗಳ ಜೀವ ಉಳಿಸುತ್ತಿದ್ದಾರೆ. ಒಬ್ಬ ಶಸ್ತ್ರಚಿಕಿತ್ಸಕ ಯಶಸ್ವಿಯಾಗಿ ಆಪರೇಷನ್ ಮಾಡಲು ಸಾಧ್ಯವಾಗುವುದು ಅರಿವಳಿಕೆ ತಜ್ಞ ವೈದ್ಯರುಗಳ ಜಾಗರೂಕತೆಯಿಂದ ಮಾತ್ರ. ರೋಗಿಗಳಿಗೆ ಎಷ್ಟು ಪ್ರಮಾಣದ ಅರಿವಳಿಕೆ ನೀಡಬೇಕು, ಆಪರೇಷನ್ ಥಿಯೇಟರ್ ನಲ್ಲಿ ಅವರ ರಕ್ತದೊತ್ತಡ, ಹೃದಯ ಬಡಿತ ಮತ್ತು ಉಸಿರಾಟ ಹೇಗೆ ನಿಯಂತ್ರದಲ್ಲಿಡಬೇಕು ಎಂಬುದನ್ನು ಪ್ರತಿಯೊಂದು ಕ್ಷಣವು ಕಣ್ಣಿಟ್ಟು ಕಾಯುವವರು. ರೋಗಿ ಪ್ರಜ್ಞೆ ಕಳೆದುಕೊಂಡು ಮರಳಿ ಪ್ರಜ್ಞೆ ಬರುವವರೆಗೂ ಅವರ ಪ್ರಾಣಕ್ಕೆ ಕಾವಲುಗಾರರಾಗಿ ನಿಲ್ಲುವವರು ಅರಿವಳಿಕೆ ತಜ್ಞ ವೈದ್ಯರು ಎಂದರು.

ಆಪರೇಷನ್ ಥಿಯೇಟರ್ ನಿಂದ ಹೊರಬಂದ ಮೇಲೆ ರೋಗಿಗಳು ಶಸ್ತ್ರಚಿಕಿತ್ಸೆ ಮಾಡಿದ ವೈದ್ಯರುಗಳಿಗೆ ಧನ್ಯವಾದ ಹೇಳುವುದು ಸಾಮಾನ್ಯ. ಆದರೆ ಯಾರ ಕಣ್ಣಿಗೂ ಬೀಳದೆ, ಯಾವುದೇ ಪ್ರಚಾರ ಬಯಸದೆ ರೋಗಿಗೆ ನೋವಾಗದಂತೆ ನೋಡಿಕೊಳ್ಳುವ ಈ ಅನಾಮಧೇಯ ಅರಿವಳಿಕೆ ತಜ್ಞ ವೈದ್ಯರುಗಳನ್ನು ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದರು.

ಸಮಾರಂಭದಲ್ಲಿ ಹಿರಿಯ ಅರಿವಳಿಕೆ ತಜ್ಞ ವೈದ್ಯರುಗಳಾದ ಡಾ.ವಿ.ದೇವಿಕ, ಡಾ.ಶಾಂತ ಕುಮಾರ್, ಡಾ.ಕಿರಣ್ ಕುಮಾರ್ ಅವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್, ಉಪಾಧ್ಯಕ್ಷೆ ಭಾಗ್ಯಗುರುರಾಜ್, ನಿರ್ದೇಶಕರಾದ ಎಂ.ಎಸ್.ನರಸಿಂಹ, ಶಶಿಕುಮಾರ್, ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಕಾಟ್ನಾಳು ಮಹದೇವ, ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಎಸ್.ಸಿ ಘಟಕದ ಅಧ್ಯಕ್ಷ ಕಂಠಿಕುಮಾರ್, ಗ್ರಂಥ ಪಾಲಕಿ ದಿವ್ಯಕುಮಾರಿ, ಹಿರಿಯ ಆರೋಗ್ಯ ನಿರೀಕ್ಷಕ ರಮೇಶ್, ಮುಖಂಡರಾದ ಸುರೇಶ್, ಪ್ರದೀಪ್, ಟಿ.ಎನ್. ಯೋಗೇಶ್ ಕುಮಾರ್, ಚಂದ್ರು, ಬಿ.ಮಮತ, ನಾಗರಾಜು, ಕೆ.ಎಸ್.ತೇಜಸ್, ಯಶಸ್ವಿ ಸೇರಿದಂತೆ ಹಲವರು ಇದ್ದರು.

# ಮಡಿಕೇರಿಯಲ್ಲಿ ಮಕ್ಕಳ ದಸರಾ ಸಂಭ್ರಮ

**ಮಡಿಕೇರಿ:** ನಾಡಹಬ್ಬ ಮಡಿಕೇರಿ ದಸರಾ ಜನೋತ್ಸವದ ಸಂಭ್ರಮದ ನಡುವೆ, ಚಿಣ್ಣರಿಗಾಗಿ ಆಯೋಜಿಸಲಾಗಿದ್ದ 13 ನೇ ವರ್ಷದ 'ಮಕ್ಕಳ ದಸರಾ' ಕಾರ್ಯಕ್ರಮವು ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ನಗರದ ಗಾಂಧಿ ಮೈದಾನದ 'ಕಲಾ ಸಂಭ್ರಮ' ವೇದಿಕೆಯಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಸಂಭ್ರಮದಿಂದ ಜರುಗಿತು.

ಪುಟಾಣಿಗಳಲ್ಲಿ ಮೂಡಿದ್ದ ಉತ್ಸಾಹ ಹಾಗೂ ಕಲಾ ಪ್ರತಿಭೆಗಳು ಸಾರ್ವಜನಿಕರ ಗಮನ ಸೆಳೆಯಿತು. ಮಕ್ಕಳ ಸಂತೆಯಲ್ಲಿ ಮಕ್ಕಳ ವ್ಯಾಪಾರ, ವ್ಯವಹಾರ ವಹಿವಾಟು ಜೋರಾಗಿಯೇ ನಡೆಯಿತು.

ಮಕ್ಕಳ ಸಂತೆ ಮತ್ತು ಅಂಗಡಿ ಸ್ಪರ್ಧೆ: ಪುಟಾಣಿಗಳಿಂದಲೇ ತೆರೆಯಲ್ಪಟ್ಟ ಮಳಿಗೆಗಳು ಹಾಗೂ ಸಂತೆ ವಹಿವಾಟು ನೆರೆದಿದ್ದವರನ್ನು ಹುಬ್ಬೇರಿಸುವಂತೆ ಮಾಡಿತು. ಪಾಲಕ್, ಮೆಂತೆ, ಸಬ್ಸಿಗೆ, ದಂಟು, ಕೀರೆ, ಗಣಿಕೆ, ನೊಗ್ಗೆ, ಬಸಳೆ, ಎಲೆಕೋಸು, ವೀಳ್ಯದೆಲೆಯಿಂದ ಹಿಡಿದು ಎಲ್ಲಾ ರೀತಿಯ ಸೊಪ್ಪುಗಳು, ತರಕಾರಿ ವಿಭಾಗದಲ್ಲಿ ಕುಂಬಳ, ಬೂದುಕುಂಬಳ, ಸೌತೆಕಾಯಿ, ಸೋರೆಕಾಯಿ ವಿವಿಧ ರೀತಿಯ ತರಕಾರಿಗಳು, ಹಣ್ಣುಗಳಲ್ಲಿ ಬಾಳೆ, ಕಿತ್ತಳೆ, ಚಕೋತಾ, ಸೇಬು, ಮತ್ತೊಂದು ಬದಿಯಲ್ಲಿ ಪಾನಿಪೂರಿ, ಮಸಾಲಪೂರಿ, ಸೇರಿದಂತೆ ವಿವಿಧ ರೀತಿಯ ತಂಪು ಪಾನೀಯ ಹೀಗೆ ಒಂದು ಬದಿಯಲ್ಲಿ ಸೊಪ್ಪು ತರಕಾರಿ ಇದ್ದರೆ, ಮತ್ತೊಂದು ಬದಿಯಲ್ಲಿ ತಿಂಡಿ ತಿನಿಸು ವ್ಯಾಪಾರ ಎಲ್ಲರನ್ನು ಆಕರ್ಷಣೆಯಗೊಳಿಸಿತು.

ಜೊತೆಗೆ ತಿಂಡಿ ತಿನಿಸುಗಳು ಪ್ರತಿಯೊಬ್ಬರ ಬಾಯಲ್ಲಿ ನೀರು ಭರಿಸುವಂತೆ ಮಾಡಿತ್ತು. ವಿವಿಧ ಪೌರಾಣಿಕ, ಐತಿಹಾಸಿಕ ಹಾಗೂ ರಾಷ್ಟ್ರೀಯ ನಾಯಕರ ವೇಷಭೂಷಣಗಳಲ್ಲಿ ಕಂಗೊಳಿಸಿದ ಮಕ್ಕಳು ನೋಡುಗರ ಕಣ್ಮನ ಸೆಳೆದರು. ಮಕ್ಕಳ ಸೃಜನಶೀಲತೆಯನ್ನು ಹೊರಹಾಕಲು ಮಂಟಪ ರಚನಾ ಸ್ಪರ್ಧೆಗಳು ಬಹಳಷ್ಟು ಮೆಚ್ಚುಗೆ ಗಳಿಸಿದವು. ಮಡಿಕೇರಿ ದಸರಾ ಮಂಟಪವೇ ಕಣ್ತುಂಬಿಕೊಳ್ಳುವಂತೆ ಕಿರುಮಂಟಪ ಮಾದರಿಯಲ್ಲಿ ಐತಿಹಾಸಿಕ ಸಂದೇಶ ಸಾರಿದ್ದು ವಿಶೇಷವಾಗಿತ್ತು, ಪೌರಾಣಿಕ ಮಂಟಪ ಮೂಲಕ ಚಿತ್ರಣ ಗಮನ ಸೆಳೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಮಾತನಾಡಿ, ಮಕ್ಕಳ ವ್ಯಾಪಾರ ವಹಿವಾಟಿನ ಬಗ್ಗೆ ತಿಳಿದುಕೊಳ್ಳಲು ಮಕ್ಕಳ ಸಂತೆ ಸಹಕಾರಿಯಾಗಿದೆ. ಆ ನಿಟ್ಟಿನಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿರುವುದು ವಿಶೇಷವಾಗಿದೆ ಎಂದು ಹೇಳಿದರು. ಶಿಕ್ಷಣ ಇಲಾಖೆಯಿಂದ ಜಿಲ್ಲೆಯಲ್ಲಿರುವ ಐದು ವಿಷಯಗಳನ್ನು ತೆಗೆದುಕೊಂಡು ಜಿಲ್ಲೆಯ ಸಮಸ್ಯೆ ಬಗ್ಗೆ ಚರ್ಚೆ ನಡೆಸಲು ಜಿಲ್ಲೆಯಲ್ಲಿ ಯುವ ಸಂಸತ್ ಕಾರ್ಯಕ್ರಮ ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಬೇಕು. ವಿದ್ಯಾರ್ಥಿಗಳ ಪ್ರತಿಭೆಗೆ ಪೋಷಕರು ಪ್ರೋತ್ಸಾಹ ನೀಡುವಂತಾಗಬೇಕು ಎಂದು ಕರೆ ನೀಡಿದರು.

ಮಕ್ಕಳ ಸಂತೆ, ಅಂಗಡಿ ಸ್ಪರ್ಧೆಯನ್ನು ರೋಟರಿ ಜಿಲ್ಲೆ 3181 ನ ರಾಜ್ಯಪಾಲ ಸತೀಶ್ ಭೊಳಾರ್ ಅವರು ಉದ್ಘಾಟಿಸಿ ಮಾತನಾಡಿ, ದಸರಾ ಉತ್ಸವದ ಪ್ರಯುಕ್ತ ರೋಟರಿ ಸಂಸ್ಥೆಯಿಂದ 'ರೋಟರಿ ನವರಂಗ' ಎಂಬ ಕಲ್ಪನೆಯೊಂದಿಗೆ ಅನ್ನದಾನ, ಆರೋಗ್ಯ ಸೇವೆ, ಪರಿಸರ ಜಾಗೃತಿ, ಹಿರಿಯ ನಾಗರಿಕರಿಗೆ ಗೌರವ ಸೇರಿದಂತೆ ಒಂಭತ್ತು ದಿವಸದ ವಿಶಿಷ್ಟ ಕಾರ್ಯಕ್ರಮ ನಡೆಸುತ್ತಿದೆ. ಎಲ್ಲಾ ಸಂಘ–ಸಂಸ್ಥೆ ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸಲಹೆ ಮಾಡಿದರು. ಸರ್ಕಾರದ ಸಹಕಾರದೊಂದಿಗೆ ಉತ್ತಮ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಇದು ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ ತುಂಬುವುದರ ಜೊತೆಗೆ ಅವರಲ್ಲಿ ವ್ಯವಹಾರ ಜ್ಞಾನವನ್ನು ಬೆಳೆಸಲು ಸಹಕಾರಿಯಾಗಿದೆ. ಅಲ್ಲದೆ, ಮಕ್ಕಳಲ್ಲಿ ಧಾರ್ಮಿಕ ಭಾವನೆ ದೇಶ ಭಕ್ತಿ ಮೂಡುತ್ತದೆ. ಇಂತಹ ಕಾರ್ಯಕ್ರಮ ಆಯೋಜಿಸಿರುವುದು ರೋಟರಿ ಮಿಸ್ಟಿ ಹಿಲ್ಸ್‌ನ ಕಾರ್ಯ ಶ್ಲಾಘನೀಯ ಎಂದರು.

ನಾವು ಮಾಡುವ ಯಾವುದೇ ಹಬ್ಬ, ಆಚರಣೆ ಅಥವಾ ಸಂಪ್ರದಾಯಗಳು ಕೇವಲ ಬಾಹ್ಯ ಪ್ರದರ್ಶನಕ್ಕಷ್ಟೇ ಸೀಮಿತವಾಗದೆ, ವ್ಯಕ್ತಿಯ ಒಳಗಿನಿಂದ ಮೂಡಿಬರುವ ಸದ್ಭಾವನೆ ಮತ್ತು ನಡವಳಿಕೆಯ ಬದಲಾವಣೆಗೆ ಸಾಕ್ಷಿಯಾದಾಗ ಮಾತ್ರ ಅವುಗಳಿಗೆ ನೈಜ ಸಾರ್ಥಕತೆ ಲಭಿಸುತ್ತದೆ. ಹಿರಿಯರನ್ನು, ತಂದೆ–ತಾಯಿಯರನ್ನು ಗೌರವದಿಂದ ಕಾಣುವಂತಾಗಬೇಕು ಎಂದು ಹೇಳಿದರು.

# ತಲಕಾವೇರಿಯಲ್ಲಿ ಪವಿತ್ರ ತೀರ್ಥೋದ್ಭವ; ಜಿಲ್ಲಾಡಳಿತದಿಂದ ಅಗತ್ಯ ಸಿದ್ಧತೆ

**ಮಡಿಕೇರಿ:** ತಲಕಾವೇರಿಯಲ್ಲಿ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಸಿದ್ಧತೆಗಳು ನಡೆದಿದೆ.

ಅಕ್ಟೋಬರ್ 17 ರಂದು ರಾತ್ರಿ 7.50 ಗಂಟೆಗೆ ಸಂಭವಿಸುವ ಪವಿತ್ರ ತೀರ್ಥೋದ್ಭವ ಕಣ್ತುಂಬಿಕೊಳ್ಳಲು ಭಕ್ತರು ಕಾತರರಾಗಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಆಗಮಿಸುವ ಭಕ್ತರು ಪವಿತ್ರ ತೀರ್ಥ ಪಡೆಯಲು ತಲಕಾವೇರಿಗೆ ಆಗಮಿಸಲಿದ್ದಾರೆ.

ಕೊಡಗು ಜಿಲ್ಲೆ ಸೇರಿದಂತೆ ನಾಡಿನ ಹಾಗೂ ನೆರೆ ಹೊರೆಯ ರಾಜ್ಯದ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ತಲಕಾವೇರಿಗೆ ಆಗಮಿಸಲಿದ್ದಾರೆ. ಭಕ್ತಾಧಿಗಳಿಗೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸುವಲ್ಲಿ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ಕುಡಿಯುವ ನೀರು, ಭಕ್ತಾಧಿಗಳು ಸಾಲುಗಟ್ಟಿ ಬರಲು ಬ್ಯಾರಿಕೇಡ್‌ಗಳ ನಿರ್ಮಾಣ, ಗಣ್ಯರು ಹಾಗೂ ಪತ್ರಕರ್ತರಿಗೆ ಪ್ರತ್ಯೇಕ ಬ್ಯಾರಿಕೇಡ್ ಅಳವಡಿಸಲಾಗಿದೆ. ನಾಡಿನ ಜೀವನದಿ ಕಾವೇರಿ ಉಗಮ ಸ್ಥಾನ ತಲಕಾವೇರಿಯಲ್ಲಿ ಹೂವಿನ ಅಲಂಕಾರ ಸೇರಿದಂತೆ ಹಲವು ಸಿದ್ಧತೆಗಳು ನಡೆದಿದೆ.

ಕೊಡಗು ಏಕೀಕರಣ ರಂಗದಿಂದ ಪ್ರಸಾದ ವಿತರಣೆ ನಡೆಯಲಿದೆ. ಭಾಗಮಂಡಲದಿಂದ–ತಲಕಾವೇರಿ ವರೆಗೆ ಬೆಳಕಿನ ವ್ಯವಸ್ಥೆ, ಕಳೆದ ಬಾರಿಯಂತೆ ಈ ಬಾರಿಯೂ ಕೆಎಸ್‌ಆರ್‌ಟಿಸಿ ವತಿಯಿಂದ 25 ಬಸ್ ವ್ಯವಸ್ಥೆ ಮಾಡಲಾಗಿದ್ದು, ಭಕ್ತಾಧಿಗಳಿಗೆ ಉಚಿತ ಪ್ರಯಾಣಕ್ಕೆ ಅವಕಾಶವಿದೆ.

ತಲಕಾವೇರಿಯಲ್ಲಿ ತಾಯಿ ಕಾವೇರಿಮಾತೆ ಕುರಿತು ಗೀತಾ ಗಾಯನ ಕಾರ್ಯಕ್ರಮಕ್ಕೆ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿದ್ದು, ಕನ್ನಡ ಮತ್ತು ಸಂಸ್ಕೃತಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಗೀತಾ ಗಾಯನ ಕಾರ್ಯಕ್ರಮ ನಡೆಯಲಿದೆ.

ಪೊಲೀಸ್ ಇಲಾಖೆಯಿಂದ ಅಗತ್ಯ ಬಂದೋಬಸ್ತ್ ಮಾಡಲಾಗಿದ್ದು, ಉಪ ಪೊಲೀಸ್ ವರಿಷ್ಠಾಧಿಕಾರಿಗಳು, ಪಿಎಸ್‌ಐಗಳು, ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಪೊಲೀಸ್‌ಗಳು, ಹೋಂ ಗಾರ್ಡ್‌ಗಳು, ಕರ್ತವ್ಯ ನಿರ್ವಹಿಸಲಿದ್ದಾರೆ. ಜೊತೆಗೆ ಅಗತ್ಯ ಇರುವ ಕಡೆಗಳಲ್ಲಿ ಸಿಸಿಟಿವಿ ಅಳವಡಿಸಲಾಗಿದೆ.

ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಎ.ಎಸ್.ಪೊನ್ನಣ್ಣ ಅವರು ಶುಕ್ರವಾರ ತಲಕಾವೇರಿಗೆ ಭೇಟಿ ನೀಡಿ ದೇವಾಲಯದ ಬಳಿ ಭಂಡಾರ ಮನೆ ನೂತನ ಕಟ್ಟಡವನ್ನು ಉದ್ಘಾಟಿಸಿದರು.

ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ವತಿಯಿಂದ ನೀಡಲಾಗುವ ಅನುದಾನದಲ್ಲಿ ಭಂಡಾರ ಮನೆ ಕಟ್ಟಡ ನಿರ್ಮಿಸಲಾಗಿದೆ.

ಬಳಿಕ ತಲಕಾವೇರಿ ಜಾತ್ರಾ ಮಹೋತ್ಸವ ಸಿದ್ಧತೆ ಸಂಬಂಧ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ಮಾಹಿತಿ ಪಡೆದರು.

ಬಳಿಕ ಮಾತನಾಡಿದ ಶಾಸಕರು, ತಾಯಿ ಕಾವೇರಿ ಪವಿತ್ರ ತೀರ್ಥೋದ್ಭವ ಸಂಬಂಧ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕಾವೇರಿ ಮಾತೆ ತೀರ್ಥರೂಪಿಣಿ ದರ್ಶನ ಪಡೆಯಲು ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲಿದ್ದು, ಭಕ್ತಾಧಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಗಮನ ಹರಿಸಲಾಗಿದೆ ಎಂದರು.

ಜಿಲ್ಲಾಡಳಿತ, ಪೊಲೀಸ್, ದೇವಾಲಯ ಸಮಿತಿ, ವಿವಿಧ ಇಲಾಖೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಅಗತ್ಯ ತಯಾರಿ ಮಾಡಿಕೊಂಡಿದ್ದಾರೆ ಂದು ಮಾಹಿತಿ ನೀಡಿದರು.

ಕೊಡಗು ಏಕೀಕರಣ ರಂಗದಿಂದ ಪ್ರಸಾದ ವ್ಯವಸ್ಥೆ ಇರಲಿದೆ. ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸಲಿದ್ದು, ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮುಜರಾಯಿ ಇಲಾಖೆಯಿಂದ 75 ಲಕ್ಷ ರೂ. ಬಿಡುಗಡೆಗೆ ಆದೇಶ ಆಗಿದೆ ಎಂದು ಶಾಸಕರು ಮಾಹಿತಿ ನೀಡಿದರು.

ಭಾಗಮಂಡಲದಿಂದ ತಲಕಾವೇರಿಯ ವರೆಗೆ ನಡೆಯಲಿರುವ ಪಾದಯಾತ್ರೆಯಲ್ಲಿ ಸಹ ಪಾಲ್ಗೊಳ್ಳಲಾಗುವುದು ಎಂದು ಶಾಸಕರಾದ ಪೊನ್ನಣ್ಣ ಅವರು ತಿಳಿಸಿದರು.

ದೇವಾಲಯ ವ್ಯವಸ್ಥಾಪನ ಸಮಿತಿ ಅಧ್ಯಕ್ಷರಾದ ಬಾನಂಡ ಪ್ರಥ್ಯು, ಲಕ್ಷ್ಮಣ ಎಂ.ಸಿ., ಕಾಂಚನ ಕೆ.ಪಿ., ಹರ್ಷ ಡಿ.ಎನ್, ಕೆ.ಎ.ತಿಮ್ಮಯ್ಯ, ಸಿ.ಎ.ಅಯ್ಯಣ್ಣ, ಕೆ.ಜೆ.ರಘುನಾಥ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸದಸ್ಯರಾದ ಕುದುಪಜೆ ಪ್ರಕಾಶ್, ತಕ್ಕ ಮುಖ್ಯಸ್ಥರಾದ ಕೋಡಿ ಮೋಟಯ್ಯ, ಭಗಂಡೇಶ್ವರ ದೇವಾಲಯ ತಕ್ಕ ಮುಖ್ಯಸ್ಥರಾದ ಬಳ್ಳಡ್ಕ ಅಪ್ಪಾಜಿ, ದೇವಾಲಯದ ಇಓ ಚಂದ್ರಶೇಖರ್, ಲೋಕೋಪಯೋಗಿ ಎಂಜಿನಿಯರ್ ಗಿರೀಶ್, ನಿರ್ಮಿತಿ ಕೇಂದ್ರದ ಎಜಿನಿಯರ್ ಸಚಿನ್ ಇತರರು ಇದ್ದರು.

ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿ, ಪರಿಶೀಲನೆ: ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಅವರು ಶುಕ್ರವಾರ ತಲಕಾವೇರಿಗೆ ಭೇಟಿ ನೀಡಿ ಕಾವೇರಿ ಪವಿತ್ರ ತೀರ್ಥೋದ್ಭವ ಜಾತ್ರೆ ಸಿದ್ಧತೆ ಬಗ್ಗೆ ಪರಿಶೀಲಿಸಿದರು.

ತಾಯಿ ಕಾವೇರಿ ಮಾತೆ ಪವಿತ್ರ ತೀಥೋದ್ಭವಕ್ಕೆ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲಿದ್ದು, ಬ್ಯಾರಿಕೇಡ್ ನಿರ್ಮಾಣ, ಬೆಳಕಿನ ವ್ಯವಸ್ಥೆ, ಹೂವಿನ ಅಲಂಕಾರ, ಮೂಲ ಸೌಲಭ್ಯಗಳು ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ, ವಾಹನ ನಿಲುಗಡೆ ವ್ಯವಸ್ಥೆ, ಗೀತಾ ಗಾಯನ ಕಾರ್ಯಕ್ರಮಕ್ಕೆ ಪ್ರತ್ಯೇಕ ವೇದಿಕೆ ನಿರ್ಮಾಣ, ಪ್ರಸಾದ ವಿತರಣಾ ಕೊಠಡಿ ಹೀಗೆ ಹಲವು ಸಿದ್ಧತೆ ಪರಿಶೀಲಿಸಿದರು.

# ವಕೀಲರ ಕಲ್ಯಾಣ ನಿಧಿ ಹೆಚ್ಚಳ, ಕುಟುಂಬಕ್ಕೆ 5 ಲಕ್ಷ ವೈದ್ಯಕೀಯ ವಿಮೆ : ಆರ್.ರಾಜಣ್ಣ




**ಮಂಡ್ಯ :** ವಕೀಲರ ಕಲ್ಯಾಣ ನಿಧಿ ಹೆಚ್ಚಳ, ವಕೀಲರ ಕುಟುಂಬಗಳಿಗೆ ₹5 ಲಕ್ಷ ವೈದ್ಯಕೀಯ ವಿಮೆ, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಆಡಳಿತ ವ್ಯವಸ್ಥೆಯ ಗಣಕೀಕರಣ ಹಾಗೂ ಕಾನೂನು ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಆದ್ಯತೆ ನೀಡಲಾಗುವುದು ಎಂದು ರಾಜ್ಯ ವಕೀಲರ ಪರಿಷತ್ತಿನ ನೂತನ ಅಧ್ಯಕ್ಷ ಆರ್. ರಾಜಣ್ಣ ತಿಳಿಸಿದರು.

ನಗರದ ಜಿಲ್ಲಾ ವಕೀಲರ ಸಂಘದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಗೌರವ ಸಮರ್ಪಣಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ವಕೀಲರ ಕಲ್ಯಾಣ ನಿಧಿಗೆ ಹೆಚ್ಚಿನ ಅನುದಾನ ಒದಗಿಸುವ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಚರ್ಚಿಸಲಾಗುವುದು. ವಾರ್ಷಿಕ ಬಜೆಟ್‌ನಲ್ಲಿ ನಿರ್ದಿಷ್ಟ ಅನುದಾನ ಮೀಸಲಿಡುವಂತೆ ಮನವಿ ಮಾಡಲಾಗಿದೆ. ನಿರಂತರ ಅನುದಾನ ದೊರೆತರೆ ಸಂಕಷ್ಟದಲ್ಲಿರುವ ವಕೀಲರು ಹಾಗೂ ಅವರ ಕುಟುಂಬಗಳಿಗೆ ಹೆಚ್ಚಿನ ನೆರವು ನೀಡಲು ಸಾಧ್ಯವಾಗಲಿದೆ ಎಂದರು. ವಕೀಲರ ನೋಂದಣಿ, ಕಲ್ಯಾಣ ನಿಧಿ, ವೈದ್ಯಕೀಯ ನೆರವು ಮತ್ತು ಮರಣ ಪರಿಹಾರ ಸೇರಿದಂತೆ ವಿವಿಧ ಸೇವೆಗಳು ಸುಲಭವಾಗಿ ದೊರೆಯುವಂತಾಗಬೇಕು. ಪರಿಷತ್ತಿನ ಕಚೇರಿಗೆ ಬರುವ ವಕೀಲರು ಅನಗತ್ಯವಾಗಿ ಕಾಯುವ ಅಥವಾ ಕಚೇರಿಗಳ ಸುತ್ತ ಅಲೆದಾಡುವ ಪರಿಸ್ಥಿತಿ ಇರಬಾರದು. ಪರಿಷತ್ತು ವಕೀಲರ ಸ್ವಂತ ಸಂಸ್ಥೆಯಾಗಿದ್ದು, ಪಾರದರ್ಶಕ ಹಾಗೂ ಪರಿಣಾಮಕಾರಿ ಆಡಳಿತಕ್ಕೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಎಸ್.ಸತ್ಯಾನಂದ ಮಾತನಾಡಿ, ರಾಜ್ಯದ ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳ ವಕೀಲರ ಸಂಘಗಳಿಗೆ ಸ್ವಂತ ಕಟ್ಟಡ, ಆರ್ಥಿಕ ಸ್ವಾವಲಂಬನೆ ಹಾಗೂ ಸಮರ್ಪಕ ಕಲ್ಯಾಣ ಸೌಲಭ್ಯ ಕಲ್ಪಿಸಲು ಸಮಗ್ರ ಯೋಜನೆ ರೂಪಿಸಬೇಕು ಎಂದು ಆಗ್ರಹಿಸಿದರು.ಪ್ರತಿ ಜಿಲ್ಲೆಯಲ್ಲಿ 'ಸಂವಿಧಾನ ಭವನ' ನಿರ್ಮಿಸುವುದರ ಜತೆಗೆ ವಕೀಲರ ಮರಣ ಪರಿಹಾರ ಮೊತ್ತ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಪ್ರತಿ ಜಿಲ್ಲೆಯಲ್ಲೂ ವಕೀಲರ ಕಲ್ಯಾಣ ಟ್ರಸ್ಟ್ ಸ್ಥಾಪಿಸಿ, ಜಿಲ್ಲಾ ಮತ್ತು ತಾಲ್ಲೂಕು ವಕೀಲರ ಸಂಘಗಳ ಸಹಭಾಗಿತ್ವದಲ್ಲಿ ಕಲ್ಯಾಣ ಯೋಜನೆಗಳನ್ನು ರೂಪಿಸಬೇಕು ಎಂದು ಮನವಿ ಮಾಡಿದರು.

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ಜಿಲ್ಲಾ ಮತ್ತು ತಾಲ್ಲೂಕು ವಕೀಲರ ಸಂಘಗಳು ಪಡೆಯಲು ಅಗತ್ಯ ಮಾರ್ಗಸೂಚಿಗಳನ್ನು ರೂಪಿಸಬೇಕು. ಬ್ಯಾಂಕ್‌ಗಳು, ಸಕ್ಕರೆ ಕಾರ್ಖಾನೆಗಳು ಹಾಗೂ ಇತರ ಕಾರ್ಪೊರೇಟ್ ಸಂಸ್ಥೆಗಳಿಂದ ನಿಯಮಾನುಸಾರ ನೆರವು ಪಡೆಯಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಸಮಾರಂಭದಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಉಪಾಧ್ಯಕ್ಷ ಶಿವಮೂರ್ತಿ, ಅಖಿಲ ಭಾರತ ವಕೀಲರ ಪರಿಷತ್ತಿನ ಸದಸ್ಯ ಸಿ.ಎಂ. ಧನಂಜಯ್ ಹಾಗೂ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಸದಸ್ಯ ಕೆ.ಎಸ್. ಮಹದೇವ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಸಿ. ಚಂದ್ರಶೇಖರ್ ಮಾತನಾಡಿದರು.

ಸಂಘದ ಮಾಜಿ ಅಧ್ಯಕ್ಷ ಕೆ.ಎಂ.ಬಸವರಾಜು ಹಾಗೂ ಹಿರಿಯ ವಕೀಲ ಕೆ.ಎಂ. ಬಸವರಾಜು ಅಭಿನಂದನಾ ನುಡಿಗಳನ್ನಾಡಿದರು.ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಸತೀಶ್ ಸ್ವಾಗತಿಸಿದರು. ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳು, ಹಿರಿಯ ವಕೀಲರು ಹಾಗೂ ವಕೀಲರು ಉಪಸ್ಥಿತರಿದ್ದರು.

# ಕೃಷಿ ಉತ್ಪನ್ನಗಳ ರಫ್ತು ಮಾರುಕಟ್ಟೆ ಕುರಿತು ಕೃಷಿ ವಿಜ್ಞಾನ ಕೇಂದ್ರದಲ್ಲಿ ಜಾಗೃತಿ ಕಾರ್ಯಕ್ರಮ

**ಮಡಿಕೇರಿ:** ಪ್ರಸ್ತುತ ಕೃಷಿ ಕ್ಷೇತ್ರದಲ್ಲಿ ರೈತರ ಆದಾಯವನ್ನು ಹೆಚ್ಚಿಸಲು ಹಾಗೂ ಕೃಷಿ ಆಧಾರಿತ ಉದ್ಯಮಗಳನ್ನು ಬಲಪಡಿಸಲು ಮಾರುಕಟ್ಟೆ ಸೌಲಭ್ಯಗಳನ್ನು ವಿಸ್ತರಿಸುವುದು, ಮೌಲ್ಯವರ್ಧನೆಗೆ ಉತ್ತೇಜನ ನೀಡುವುದು ಮತ್ತು ರಫ್ತು ಅವಕಾಶಗಳನ್ನು ಅನ್ವೇಷಿಸುವುದು ಅತ್ಯಂತ ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ, ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ಕೊಡಗು, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್,ಬೆಂಗಳೂರು ಪ್ರಾದೇಶಿಕ ಕಚೇರಿಗಳ ಸಹಯೋಗದೊಂದಿಗೆ "ಕೃಷಿ ಸಂಸ್ಕರಿತ ಉತ್ಪನ್ನಗಳ ರಫ್ತು ಮಾರುಕಟ್ಟೆಗಳು" ಎಂಬ ವಿಷಯದ ಕುರಿತು ಒಂದು ದಿನದ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮವು ಗುರುವಾರ ಕೆವಿಕೆ, ಕೊಡಗಿನಲ್ಲಿ ಆಯೋಜಿಸಿತು.

ರೈತರು, ಬೆಳೆಗಾರರು, ರೈತ ಉತ್ಪಾದಕ ಸಂಸ್ಥೆಗಳು ಹಾಗೂ ಗ್ರಾಮೀಣ ಉದ್ಯಮಿಗಳಿಗೆ ಕೃಷಿ ಮತ್ತು ಸಂಸ್ಕರಿತ ಉತ್ಪನ್ನಗಳ ರಫ್ತು ಅವಕಾಶಗಳು, ಗುಣಮಟ್ಟದ ಮಾನದಂಡಗಳು, ನಿಯಂತ್ರಣಾತ್ಮಕ ಅವಶ್ಯಕತೆಗಳು, ಅಗತ್ಯ ದಾಖಲೆಗಳು ಹಾಗೂ ಅನುಸರಣೆ ಪ್ರಕ್ರಿಯೆಗಳ ಕುರಿತು ಅರಿವು ಮೂಡಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು.

ಕಾರ್ಯಕ್ರಮದಲ್ಲಿ 100 ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ರೈತರ ಆದಾಯವನ್ನು ಹೆಚ್ಚಿಸುವುದು ಹಾಗೂ ಕೃಷಿ ಆಧಾರಿತ ಉದ್ಯಮಗಳ ಆರ್ಥಿಕ ಸುಸ್ಥಿರತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ರಫ್ತು ಮಾರುಕಟ್ಟೆಗಳ ಅನ್ವೇಷಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಸಂಪರ್ಕಗಳ ಬಲವರ್ಧನೆಗೆ ವಿಶೇಷ ಒತ್ತು ನೀಡಲಾಯಿತು.

ಕೃಷಿ ಮತ್ತು ಸಂಸ್ಕರಿತ ಉತ್ಪನ್ನಗಳ ರಫ್ತಿಗೆ ಇರುವ ಅವಕಾಶಗಳು ಹಾಗೂ ಅನುಸರಿಸಬೇಕಾದ ನಿಯಮಗಳು" ಎಂಬ ವಿಷಯದ ಕುರಿತು ನಡೆದ ತಾಂತ್ರಿಕ ಅಧಿವೇಶನದಲ್ಲಿ ರಫ್ತಿನ ವಿವಿಧ ಅವಕಾಶಗಳು, ಅಗತ್ಯ ಕಾರ್ಯವಿಧಾನಗಳು ಹಾಗೂ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳನ್ನು ಪ್ರವೇಶಿಸಲು ಪಾಲಿಸಬೇಕಾದ ನಿಯಮಗಳು ಮತ್ತು ಮಾನದಂಡಗಳ ಕುರಿತು ಮಾಹಿತಿ ನೀಡಲಾಯಿತು.

ಕೃಷಿ ಉತ್ಪನ್ನಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಗುಣಮಟ್ಟದ ಭರವಸೆ, ಸೂಕ್ತ ಸಂಸ್ಕರಣಾ ವಿಧಾನಗಳು ಮತ್ತು ಮಾರುಕಟ್ಟೆ ನಿರ್ದಿಷ್ಟ ಮಾನದಂಡಗಳನ್ನು ಪಾಲಿಸುವುದರ ಮಹತ್ವವನ್ನು ವಿವರಿಸಲಾಯಿತು. ತಂತ್ರಜ್ಞಾನಗಳ ಪ್ರಸಾರ, ಸಾಮರ್ಥ್ಯ ವೃದ್ಧಿ, ತಾಂತ್ರಿಕ ಮಾರ್ಗದರ್ಶನ ಮತ್ತು ವಿಸ್ತರಣಾ ಸೇವೆಗಳ ಮೂಲಕ ಮಾರುಕಟ್ಟೆ ಆಧಾರಿತ ಕೃಷಿಯನ್ನು ಉತ್ತೇಜಿಸುವಲ್ಲಿ ಐಸಿಎಆರ್–ಕೆವಿಕೆ, ಕೊಡಗಿನ ಪಾತ್ರವನ್ನು ಸಹ ವಿವರಿಸಲಾಯಿತು. ಸಂವಾದಾತ್ಮಕ ಪ್ರಶ್ನೋತ್ತರ ಅಧಿವೇಶನದಲ್ಲಿ ಭಾಗವಹಿಸಿದವರು ರಫ್ತು ಅವಕಾಶಗಳು ಮತ್ತು ಮಾರುಕಟ್ಟೆ ಪ್ರವೇಶಕ್ಕೆ ಸಂಬಂಧಿಸಿದ ತಮ್ಮ ಸಂದೇಹಗಳನ್ನು ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ, ಮಾಹಿತಿ ವಿನಿಮಯ ಮಾಡಿಕೊಂಡರು.

ಕಾರ್ಯಕ್ರಮವನ್ನು ಐಸಿಎಆರ್–ಕೆವಿಕೆ, ಕೊಡಗಿನ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ.ಸಂಗಪ್ಪ, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ ಬೆಂಗಳೂರಿನ ವ್ಯವಹಾರ ಅಭಿವೃದ್ಧಿ ವ್ಯವಸ್ಥಾಪಕರಾದ ಕಾರಂತ್ ಹಾಗೂ ಮಡಿಕೇರಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಶಿವಕುಮಾರ್, ವಿಷಯ ತಜ್ಞರು (ತೋಟಗಾರಿಕೆ) ಪ್ರಭಾಕರ ಬಿ., ವಿಷಯ ತಜ್ಞರು (ಸಸ್ಯ ಸಂರಕ್ಷಣೆ) ವೀರೇಂದ್ರ ಕುಮಾರ್ ಕೆ.ವಿ. ಅವರ ಉಪಸ್ಥಿತಿಯಲ್ಲಿ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ವಿಷಯ ತಜ್ಞರು (ಮಣ್ಣು ವಿಜ್ಞಾನ) ಡಾ.ಮೋಹನ್ ಕುಮಾರ್ ಕೆ.ಟಿ., ವಿಷಯ ತಜ್ಞರು (ಗೃಹ ವಿಜ್ಞಾನ) ಡಾ. ಮೃಣಾಲ್ ಬಾರ್ಬ್ಯೆ ಹಾಗೂ ಕಾರ್ಯಕ್ರಮ ಸಹಾಯಕರಾದ(ಕಂಪ್ಯೂಟರ್) ಬೆನೆಸಿಯೋ ಫರ್ನಾಂಡಿಸ್, ಉಪಸ್ಥಿತರಿದ್ದರು.

ಇದರೊಂದಿಗೆ ನಬಾರ್ಡ್ ಪ್ರತಿನಿಧಿಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳು, ಐಸಿಎಆರ್–ಕೆವಿಕೆ, ಕೊಡಗಿನ ವಿಜ್ಞಾನಿಗಳು ಮತ್ತು ತಾಂತ್ರಿಕ ಸಿಬ್ಬಂದಿ, ರೈತರು, ಬೆಳೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಉದ್ಯಮಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಕಾರ್ಯಕ್ರಮವು ಜ್ಞಾನ ವಿನಿಮಯಕ್ಕೆ ಉತ್ತಮ ವೇದಿಕೆಯನ್ನು ಒದಗಿಸುವುದರ ಜೊತೆಗೆ, ಕೊಡಗು ಜಿಲ್ಲೆಯಲ್ಲಿ ರಫ್ತು ಆಧಾರಿತ ಕೃಷಿ ಅಭಿವೃದ್ಧಿ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ವೈವಿಧ್ಯೀಕರಣದ ಕುರಿತು ಅರಿವು ಮೂಡಿಸಲು ಸಹಕಾರಿಯಾಯಿತು.

# ಹಸಿವಿನಿಂದ ಹಸಿರು ಕ್ರಾಂತಿಯೆಡೆಗೆ: ಭಾರತದ ಬಡತನ ಮುಕ್ತ ಪಯಣ!



| ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ



ಬಡತನವು ಕೇವಲ ಹಣಕಾಸಿನ ಕೊರತೆಯಲ್ಲ; ಅದು ಶಿಕ್ಷಣ, ಆರೋಗ್ಯ ಮತ್ತು ಸಭ್ಯ ಜೀವನ ಮಟ್ಟದಿಂದ ವಂಚಿತವಾಗುವ ಸ್ಥಿತಿ.

1947ರಲ್ಲಿ ಸ್ವಾತಂತ್ರ್ಯ ಪಡೆದ ಭಾರತದಿಂದ ಹಿಡಿದು 2026ರ ಆಧುನಿಕ ಭಾರತದವರೆಗಿನ ಬಡತನ ನಿರ್ಮೂಲನೆಯ ಪಯಣವು ಅತ್ಯಂತ ರೋಚಕ ಹಾಗೂ ಜಾಗತಿಕ ಮಟ್ಟದಲ್ಲಿ ಗಮನಾರ್ಹವಾದದ್ದು.

ಬಡತನ ನಿರ್ಮೂಲನೆಗಾಗಿರುವ ಅಂತರರಾಷ್ಟ್ರೀಯ ದಿನದ ಇತಿಹಾಸ : ಈ ಆಚರಣೆಯ ಬೇರುಗಳು 1987ರ ಅಕ್ಟೋಬರ್ 17ರಲ್ಲಿವೆ. ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿರುವ 'ಟ್ರೊಕಾಡೆರೊ' **(Trocadéro)** ಮೈದಾನದಲ್ಲಿ ಫಾದರ್ ಜೋಸೆಫ್ ವ್ರೆಸಿನ್ಸ್ಕಿ **(Father Joseph Wresinski)** ಅವರ ನೇತೃತ್ವದಲ್ಲಿ 1,00,000ಕ್ಕೂ ಹೆಚ್ಚು ಜನರು ಬಡತನ, ಹಸಿವು ಮತ್ತು ಹಿಂಸಾಚಾರದ ಸಂತ್ರಸ್ತರ ಗೌರವಾರ್ಥವಾಗಿ ಸಭೆ ಸೇರಿದ್ದರು.

ವಿಶ್ವಸಂಸ್ಥೆಯ ಅಧಿಕೃತ ಮಾನ್ಯತೆ (1992): ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಡಿಸೆಂಬರ್ 22, 1992 ರಂದು ನಿರ್ಣಯ 47/196 ಅನ್ನು ಅಂಗೀಕರಿಸುವ ಮೂಲಕ, ಪ್ರತಿ ವರ್ಷ ಅಕ್ಟೋಬರ್ 17 ಅನ್ನು 'ಅಂತರರಾಷ್ಟ್ರೀಯ ಬಡತನ ನಿರ್ಮೂಲನೆ ದಿನ' ಎಂದು ಅಧಿಕೃತವಾಗಿ ಘೋಷಿಸಿತು.

**2. ಮಹತ್ವ :** ಮಾನವ ಹಕ್ಕುಗಳ ರಕ್ಷಣೆ: ಬಡತನವು ಕೇವಲ ಹಣದ ಅಭಾವವಲ್ಲ; ಅದು ಮಾನವ ಹಕ್ಕುಗಳ ಉಲ್ಲಂಘನೆ ಎಂಬುದನ್ನು ಜಗತ್ತಿಗೆ ನೆನಪಿಸುವುದು ಈ ದಿನದ ಮುಖ್ಯ ಉದ್ದೇಶ.

**ಸಂಯುಕ್ತ ಸವಾಲು ಜಾಗೃತಿ:** ಶೋಷಣೆ, ತಾರತಮ್ಯ, ಶಿಕ್ಷಣ ಹಾಗೂ ಆರೋಗ್ಯ ಸೌಕರ್ಯಗಳಿಂದ ವಂಚಿತರಾದ ಬಡ ಜನರ ಧ್ವನಿಗೆ ಜಾಗತಿಕ ವೇದಿಕೆ ಕಲ್ಪಿಸುವುದು.

**ಸುಸ್ಥಿರ ಅಭಿವೃದ್ಧಿ ಗುರಿ (SDG 1):** ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಮೊದಲನೆಯ ಪ್ರಮುಖ ಗುರಿಯಾದ "ಎಲ್ಲಾ ರೂಪದ ಬಡತನವನ್ನು ಸಂಪೂರ್ಣವಾಗಿ ಕೊನೆಗೊಳಿಸುವುದು" **(No Poverty)** ಎಂಬುದನ್ನು ಸಾಧಿಸಲು ಸರ್ಕಾರಗಳು ಮತ್ತು ನಾಗರಿಕ ಸಮಾಜವನ್ನು ಜಾಗೃತಗೊಳಿಸುವುದು.

**ಬಡತನದಲ್ಲಿದ್ದವರ ಭಾಗಿತ್ವ:** ಬಡತನ ನಿರ್ಮೂಲನೆಯ ನೀತಿ ರೂಪಿಸುವಾಗ ಸ್ವತಃ ಬಡತನ ಅನುಭವಿಸುತ್ತಿರುವ ಜನರ ಅಭಿಪ್ರಾಯ ಮತ್ತು ಅನುಭವಗಳಿಗೆ ಆದ್ಯತೆ ನೀಡುವುದು.

**ಅಕ್ಟೋಬರ್ 17, ಜಾಗತಿಕ ಬಡತನ ನಿರ್ಮೂಲನಾ ದಿನಾಚರಣೆ**

1. ಸ್ವಾತಂತ್ರ್ಯದ ಸಮಯದಲ್ಲಿದ್ದ ಬಡತನದ ಪ್ರಮಾಣ (1947): 1947ರಲ್ಲಿ ಬ್ರಿಟಿಷ್ ಆಡಳಿತದಿಂದ ಭಾರತ ಸ್ವಾತಂತ್ರ್ಯ ಪಡೆದಾಗ ದೇಶದ ಆರ್ಥಿಕ ಸ್ಥಿತಿ ತೀವ್ರ ಸಂಕಷ್ಟದಲ್ಲಿತ್ತು.

**ಬಡತನದ ಪ್ರಮಾಣ:** ಸ್ವಾತಂತ್ರ್ಯದ ಸಮಯದಲ್ಲಿ ಭಾರತದ ಒಟ್ಟು ಜನಸಂಖ್ಯೆಯ ಸುಮಾರು 80% ರಷ್ಟು ಭಾಗ ಬಡತನ ರೇಖೆಗಿಂತ ಕೆಳಗಿದ್ದರು

ಪರಿಸ್ಥಿತಿ: ತೀವ್ರ ಆಹಾರ ಧಾನ್ಯಗಳ ಕೊರತೆ, ದುರ್ಬಲ ಕೃಷಿ ಕ್ಷೇತ್ರ, ಸಾಂಕ್ರಾಮಿಕ ರೋಗಗಳು ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿನ ಹಿನ್ನಡೆಯಿಂದಾಗಿ ಪ್ರಜೆಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳಾದ ಆಹಾರ, ವಸತಿ ಮತ್ತು ಬಟ್ಟೆ ಸಿಗುವುದು ಕಷ್ಟಕರವಾಗಿತ್ತು.

**2. 2026ರಲ್ಲಿ ಭಾರತದ ಬಡತನದ ಸ್ಥಿತಿಗತಿ :** ಸಾಮಾಜಿಕ ಕಲ್ಯಾಣ ಯೋಜನೆಗಳು ಮತ್ತು ಬಲವಾದ ಆರ್ಥಿಕ ಪ್ರಗತಿಯ ಫಲವಾಗಿ ಭಾರತ ಬಡತನ ನಿರ್ಮೂಲನೆಯಲ್ಲಿ ಐತಿಹಾಸಿಕ ಸಾಧನೆ ಮಾಡಿದೆ.

ಅತ್ಯಂತ ತೀವ್ರ ಬಡತನ **(Extreme Poverty):** ವಿಶ್ವಬ್ಯಾಂಕ್ ಮತ್ತು ಜಾಗತಿಕ ಅಂಕಿಅಂಶಗಳ ಪ್ರಕಾರ, ಭಾರತದಲ್ಲಿ ತೀವ್ರ ಬಡತನದ ಪ್ರಮಾಣವು ಶೇ. 3ಕ್ಕಿಂತಲೂ ಕಡಿಮೆಯಾಗಿ 1.7% ರಿಂದ 2.3% ವ್ಯಾಪ್ತಿಗೆ ಕುಸಿದಿದೆ.

ಬಹುಪರಿಮಾಣದ ಬಡತನ **(Multidimensional Poverty - MPI):** ನಿತಿ ಆಯೋಗದ **(NITI Aayog)** ಸೂಚ್ಯಂಕದ ಪ್ರಕಾರ, ಕಳೆದ ಒಂದು ದಶಕದಲ್ಲಿ ಸುಮಾರು 25 ಕೋಟಿಗೂ ಹೆಚ್ಚು ಜನರು ಬಡತನದಿಂದ ಹೊರಬಂದಿದ್ದಾರೆ. ಪ್ರಸ್ತುತ ಭಾರತದಲ್ಲಿ ಬಹುಪರಿಮಾಣದ ಬಡತನದ ಪ್ರಮಾಣವು ಶೇ. 5ಕ್ಕಿಂತಲೂ ಕೆಳಗಿಳಿದಿದೆ.

3. ಬಡತನ ಅಳೆಯುವ ಮಾನದಂಡಗಳು **(Criteria to Measure Poverty)** : ಬಡತನವನ್ನು ಅಳೆಯಲು ಪ್ರಮುಖವಾಗಿ ಎರಡು ಮಾನದಂಡಗಳನ್ನು ಬಳಸಲಾಗುತ್ತದೆ:

ಅ) ಆದಾಯ/ಬಳಕೆ ವೆಚ್ಚದ ಮಾನದಂಡ **(Income/ Consumption Expenditure)** ಕ್ಯಾಲೋರಿ ಆಧಾರಿತ (ಹಳೆಯ ಪದ್ಧತಿ): ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ ಒಬ್ಬ ವ್ಯಕ್ತಿಗೆ 2400 ಕ್ಯಾಲೋರಿ ಹಾಗೂ ನಗರ ಪ್ರದೇಶದಲ್ಲಿ 2100 ಕ್ಯಾಲೋರಿ ಆಹಾರ ಪಡೆಯಲು ಸಾಧ್ಯವಾಗದವರನ್ನು ಬಡವರು ಎಂದು ಗುರುತಿಸಲಾಗುತ್ತಿತ್ತು.

ಬಡತನ ರೇಖೆ **(Poverty Line):** ತೆಂಡೂಲ್ಕರ್ ಮತ್ತು ರಂಗರಾಜನ್ ಸಮಿತಿಗಳು ದಿನನಿತ್ಯದ ಕನಿಷ್ಠ ಬಳಕೆ ವೆಚ್ಚವನ್ನು (ಆಹಾರ, ಶಿಕ್ಷಣ, ಆರೋಗ್ಯ, ಸಾರಿಗೆ) ಆಧಾರವಾಗಿಟ್ಟುಕೊಂಡು ಬಡತನ ರೇಖೆಯನ್ನು ನಿಗದಿಪಡಿಸಿದವು.

**ವಿಶ್ವಬ್ಯಾಂಕ್ ಮಾನದಂಡ:** ದಿನಕ್ಕೆ $2.15 (ಸುಮಾರು ?180) ಗಿಂತ ಕಡಿಮೆ ಖರ್ಚು ಮಾಡುವ ವ್ಯಕ್ತಿಯನ್ನು ತೀವ್ರ ಬಡವ ಎಂದು ಪರಿಗಣಿಸಲಾಗುತ್ತದೆ.

ಆ) ಬಹುಪರಿಮಾಣದ ಬಡತನ ಸೂಚ್ಯಂಕ **(Multidimensional Poverty Index - MPI):** ಇದು ಕೇವಲ ಆದಾಯವನ್ನು ನೋಡದೆ, 3 ಮುಖ್ಯ ಕ್ಷೇತ್ರಗಳ 12 ಸೂಚ್ಯಂಕಗಳನ್ನು ಪರಿಗಣಿಸುತ್ತದೆ:

1. **ಆರೋಗ್ಯ:** ಅಪೌಷ್ಟಿಕತೆ, ಶಿಶು ಮರಣ ಪ್ರಮಾಣ, ತಾಯಂದಿರ ಆರೋಗ್ಯ.
2. **ಶಿಕ್ಷಣ:** ಶಾಲಾ ಶಿಕ್ಷಣದ ವರ್ಷಗಳು, ಶಾಲಾ ಹಾಜರಾತಿ.
3. **ಜೀವನ ಮಟ್ಟ:** ಅಡುಗೆ ಅನಿಲ, ನೈರ್ಮಲ್ಯ, ಕುಡಿಯುವ ನೀರು, ವಿದ್ಯುತ್, ವಸತಿ ಮತ್ತು ಆಸ್ತಿ.

**4. ಬಡತನ ನಿರ್ಮೂಲನೆಯಲ್ಲಿ ಭಾರತದ ಪಾತ್ರ :** ಪ್ರಪಂಚದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ, ಬಡತನ ನಿರ್ಮೂಲನೆಯಲ್ಲಿ ಕೈಗೊಂಡ ಕ್ರಮಗಳು ಜಾಗತಿಕ ಮಟ್ಟಕ್ಕೆ ಮಾದರಿಯಾಗಿವೆ:

ಆಹಾರ ಭದ್ರತೆ: ಉಚಿತ/ಸಬ್ಸಿಡಿ ಧಾನ್ಯ ವಿತರಣೆಯ 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ' (ಓಈಖಂ) ಲಕ್ಷಾಂತರ ಜನರಿಗೆ ಹಸಿವಿನಿಂದ ರಕ್ಷಣೆ ನೀಡಿದೆ.

ನೇರ ಹಣ ವರ್ಗಾವಣೆ **(DBT & JAM Trinity):** ಜನಧನ್ ಖಾತೆ, ಆಧಾರ್ ಮತ್ತು ಮೊಬೈಲ್ ಸಂಪರ್ಕದ ಮೂಲಕ ಸರ್ಕಾರದ ಯೋಜನೆಗಳ ಹಣ ಮಧ್ಯವರ್ತಿಗಳಿಲ್ಲದೆ ನೇರವಾಗಿ ಬಡವರ ಖಾತೆಗೆ ತಲುಪುತ್ತಿದೆ.

ಉದ್ಯೋಗ ಅಭಯ: 'ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ' **(MGNREGA)** ಗ್ರಾಮೀಣ ಭಾಗದಲ್ಲಿ ಕನಿಷ್ಠ ಉದ್ಯೋಗದ ಭರವಸೆ ನೀಡಿದೆ.

ಮೂಲಭೂತ ಸೌಕರ್ಯ: 'ಪ್ರಧಾನ ಮಂತ್ರಿ ಆವಾಸ್ ಯೋಜನೆ' (ವಸತಿ), 'ಸ್ವಚ್ಛ ಭಾರತ ಆಂದೋಲನ' (ಶೌಚಾಲಯ), 'ಉಜ್ವಲ ಯೋಜನೆ' (ಗ್ಯಾಸ್ ಸಂಪರ್ಕ) ಮತ್ತು 'ಜಲ್ ಜೀವನ್ ಮಿಷನ್' (ಕುಡಿಯುವ ನೀರು) ಮೂಲಕ ಬಡವರ ಜೀವನಮಟ್ಟ ಉನ್ನತೀಕರಿಸಲಾಗಿದೆ.

5. ವಿಶ್ವದ ಅತೀ ಶ್ರೀಮಂತ ಮತ್ತು ಅತೀ ಬಡ ದೇಶಗಳು (2026ರ ಜಾಗತಿಕ ಚಿತ್ರಣ) : ತಲಾ ಜಿಡಿಪಿ **(GDP per capita - PPP)** ಆಧಾರದ ಮೇಲೆ ಜಾಗತಿಕ ದೇಶಗಳ ಸ್ಥಿತಿಗತಿ ಹೀಗಿದೆ:

**ವಿಶ್ವದ ಅತೀ ಶ್ರೀಮಂತ ದೇಶಗಳು** । 1. **ಲಕ್ಸಂಬರ್ಗ್**, 2. **ಸಿಂಗಾಪುರ**, 3. **ಐರ್ಲ್ಯಾಂಡ್** , 4. **ಖತಾರ್** ।

। **ವಿಶ್ವದ ಅತೀ ಬಡ ದೇಶಗಳು** । 1. **ಬುರುಂಡಿ** , 2. **ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್** 3. **ದಕ್ಷಿಣ ಸುಡಾನ್** 4. **ಯೆಮೆನ್** ।

ಸ್ವಾತಂತ್ರ್ಯ ಬಂದಾಗ "ಹಸಿವಿನ ದೇಶ" ಎಂದು ಕರೆಸಿಕೊಳ್ಳುತ್ತಿದ್ದ ಭಾರತ, ಇಂದು ಬಡತನವನ್ನು ಯಶಸ್ವಿಯಾಗಿ ಮೆಟ್ಟಿ ನಿಲ್ಲುತ್ತಿರುವ ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಆದಾಗ್ಯೂ, ಆದಾಯದ ಅಸಮಾನತೆ, ಗ್ರಾಮೀಣ-ನಗರ ಪ್ರದೇಶಗಳ ನಡುವಿನ ವ್ಯತ್ಯಾಸ ಮತ್ತು ಗುಣಮಟ್ಟದ ಉದ್ಯೋಗ ಸೃಷ್ಟಿಯ ಸವಾಲುಗಳನ್ನು ಎದುರಿಸುವುದು ಮುಂದಿನ ದಿನಗಳಲ್ಲಿ ಭಾರತಕ್ಕೆ ಅತ್ಯಗತ್ಯವಾಗಿದೆ.

# ಆರು ಅಡಿ ಭೂಮಿಗೋಸ್ಕರ; ನೂರೆಂಟು ನಾಟಕಗಳು!






| ಶಿವಬಸಪ್ಪ ಗುರಪ್ಪ ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಮನುಷ್ಯನ ಬದುಕು ಎಷ್ಟು ವಿಚಿತ್ರವಲ್ಲವೇ? ಹುಟ್ಟುವಾಗ ಬರಿಗೈಯಲ್ಲಿ ಬರುವ ಮನುಷ್ಯ, ಬದುಕಿನುದ್ದಕ್ಕೂ ಹಣ, ಆಸ್ತಿ, ಅಂತಸ್ತು ಮತ್ತು ಭೂಮಿಯನ್ನು ಸಂಪಾದಿಸಲು ಹಗಲಿರುಳು ಶ್ರಮಿಸುತ್ತಾನೆ. ತನ್ನದೊಂದು ಮನೆ ಇರಬೇಕು, ನೂರಾರು ಎಕರೆ ಜಮೀನು ಇರಬೇಕು, ಸಮಾಜದಲ್ಲಿ ದೊಡ್ಡ ಹೆಸರು ಗಳಿಸಬೇಕು ಎಂಬ ಆಸೆಯಿಂದ ಜೀವನದ ಅಮೂಲ್ಯ ಕ್ಷಣಗಳನ್ನು ಕಳೆಯುತ್ತಾನೆ. ಆದರೆ ಬದುಕಿನ ಕೊನೆಯ ಸತ್ಯವನ್ನು ಒಮ್ಮೆ ನೆನಪಿಸಿಕೊಳ್ಳಿ! ಸಾಯುವಾಗ ತಾನು ಸಂಪಾದಿಸಿದ ಯಾವುದನ್ನೂ ತನ್ನೊಂದಿಗೆ ಕೊಂಡೊಯ್ಯಲು ಸಾಧ್ಯವಿಲ್ಲ. ಅಂತ್ಯಸಂಸ್ಕಾರದ ಸಂಪ್ರದಾಯದಲ್ಲಿ ಸಮಾಧಿಗಾಗಿ ಆರು ಅಡಿ ಭೂಮಿಯ ಮಾತು ಬರುತ್ತದೆ. ಬದುಕಿರುವಾಗ ಭೂಮಿಯ ಮೇಲೆ ಒಡೆತನ ಸಾಧಿಸಲು ಹೋರಾಡಿದ ಮನುಷ್ಯನಿಗೆ, ಕೊನೆಗೆ ಎಲ್ಲವನ್ನೂ ಬಿಟ್ಟುಹೋಗಲೇಬೇಕಾಗುತ್ತದೆ. ಹಾಗಾದರೆ, ಆರು ಅಡಿ ಭೂಮಿಗೋಸ್ಕರ ಬದುಕಿರುವಾಗ ಇಷ್ಟೊಂದು ನಾಟಕಗಳೇಕೆ?

ಭೂಮಿ ಸಂಪಾದಿಸುವುದು ತಪ್ಪಲ್ಲ; ಆಸ್ತಿಯನ್ನು ಕಾಪಾಡಿಕೊಳ್ಳುವುದೂ ತಪ್ಪಲ್ಲ. ಆದರೆ ಆಸ್ತಿಯ ಮೇಲಿನ ಆಸೆ ದುರಾಸೆಯಾಗಿ ಬದಲಾದಾಗ ಮನುಷ್ಯ ತನ್ನವರನ್ನೇ ಮರೆಯುತ್ತಾನೆ. ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಸಹೋದರರು ತುಂಡು ಜಮೀನಿಗಾಗಿ ಶತ್ರುಗಳಾಗುತ್ತಾರೆ. ಒಂದೇ ಮನೆಯಲ್ಲಿ ಪ್ರೀತಿಯಿಂದ ಬೆಳೆದವರು ಆಸ್ತಿ ಹಂಚಿಕೆಯ ಸಮಯದಲ್ಲಿ ಪರಸ್ಪರ ಆರೋಪ ಮಾಡುತ್ತಾರೆ. ಗಡಿಯ ಒಂದು ಅಡಿ ಜಾಗಕ್ಕಾಗಿ ವರ್ಷಗಟ್ಟಲೆ ನ್ಯಾಯಾಲಯದ ಮೆಟ್ಟಿಲೇರುತ್ತಾರೆ. ಈ ಹೋರಾಟದಲ್ಲಿ ಹಣ ಖರ್ಚಾಗುತ್ತದೆ, ನೆಮ್ಮದಿ ಕಳೆದುಹೋಗುತ್ತದೆ, ಸಂಬಂಧಗಳು ಮುರಿದುಬೀಳುತ್ತವೆ. ಕೊನೆಗೆ ಜಮೀನು ಸಿಕ್ಕರೂ, ಕಳೆದುಹೋದ ಪ್ರೀತಿಯನ್ನು ಮರಳಿ ಪಡೆಯಲು ಸಾಧ್ಯವೇ? ಆಸ್ತಿ ಹಂಚಿಕೆಯಾಗಬಹುದು; ಆದರೆ ಒಡೆದ ಹೃದಯಗಳನ್ನು ಮತ್ತೆ ಒಂದುಗೂಡಿಸುವುದು ಅಷ್ಟು ಸುಲಭವಲ್ಲ.

ತಂದೆ-ತಾಯಿಗಳು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಕಷ್ಟಪಟ್ಟು ಆಸ್ತಿ ಸಂಪಾದಿಸುತ್ತಾರೆ. ತಮ್ಮ ಆಸೆಗಳನ್ನು ಬದಿಗಿಟ್ಟು ಮಕ್ಕಳಿಗೆ ಸುಖದ ಬದುಕು ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಆದರೆ ಕೆಲವೊಮ್ಮೆ ಅದೇ ಆಸ್ತಿ ಮಕ್ಕಳ ನಡುವೆ ದ್ವೇಷದ ಬೀಜವಾಗುತ್ತದೆ. ತಂದೆ-ತಾಯಿಗಳಿಗೆ ವೃದ್ಧಾಪ್ಯದಲ್ಲಿ ಪ್ರೀತಿ ಮತ್ತು ಆಸರೆ ಬೇಕಾಗಿರುವಾಗ, ಮಕ್ಕಳು ಆಸ್ತಿಯ ಪಾಲಿಗಾಗಿ ಜಗಳವಾಡುವುದು ಎಂತಹ ವಿಪರ್ಯಾಸ! ಮಕ್ಕಳಿಗೆ ಜಮೀನು ನೀಡುವುದಕ್ಕಿಂತ ನ್ಯಾಯ, ಪ್ರೀತಿ, ಸಹನೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಕಲಿಸುವುದು ಮುಖ್ಯ. ಏಕೆಂದರೆ ಹಣದಿಂದ ಮನೆ ಕಟ್ಟಬಹುದು; ಆದರೆ ಪ್ರೀತಿಯಿಂದ ಮಾತ್ರ ಕುಟುಂಬವನ್ನು ಕಟ್ಟಬಹುದು.

ಈ ಭೂಮಿಯ ಮೇಲೆ ನಮ್ಮಿಗಿಂತ ಮೊದಲು ಅನೇಕರು ಬದುಕಿದ್ದಾರೆ. ದೊಡ್ಡ ಸಾಮ್ರಾಜ್ಯಗಳನ್ನು ಆಳಿದವರು, ಅಪಾರ ಸಂಪತ್ತು ಗಳಿಸಿದವರು, ಅರಮನೆಗಳನ್ನು ಕಟ್ಟಿಸಿದವರು ಎಲ್ಲರೂ ಒಂದಲ್ಲೊಂದು ದಿನ ಈ ಲೋಕವನ್ನು ತೊರೆದಿದ್ದಾರೆ. ಅವರು ಸಂಪಾದಿಸಿದ ಆಸ್ತಿ ಮಾತ್ರ ಉಳಿದಿದೆ; ಅವರು ಮಾತ್ರ ಮರೆಯಾಗಿದ್ದಾರೆ. ಇಂದು ನಮ್ಮ ಹೆಸರಿನಲ್ಲಿರುವ ಭೂಮಿ ನಾಳೆ ಮತ್ತೊಬ್ಬರ ಹೆಸರಿನಲ್ಲಿರಬಹುದು. ನಾವು ಕಟ್ಟಿದ ಮನೆಯೊಳಗೆ ಮುಂದೊಂದು ದಿನ ಬೇರೆಯವರು ಬದುಕಬಹುದು. ಇದೇ ಜೀವನದ ಸಹಜ ಸತ್ಯ. ಹೀಗಿರುವಾಗ ಭೂಮಿಯೇ ಶಾಶ್ವತವಾಗಿ ನಮ್ಮದು ಎಂಬ ಅಹಂಕಾರವೇಕೆ?

ಮನುಷ್ಯ ಸತ್ತ ನಂತರ ಅವನ ಆಸ್ತಿ ಅವನೊಂದಿಗೆ ಬರುವುದಿಲ್ಲ; ಆದರೆ ಅವನು ಬದುಕಿದ್ದಾಗ ತೋರಿಸಿದ ಪ್ರೀತಿ, ಮಾಡಿದ ಸಹಾಯ ಮತ್ತು ಹಂಚಿದ ಮಾನವೀಯತೆ ಜನರ ಮನಸ್ಸಿನಲ್ಲಿ ಉಳಿಯುತ್ತವೆ. ಆದ್ದರಿಂದ ಆಸ್ತಿಯನ್ನು ಸಂಪಾದಿಸೋಣ, ಆದರೆ ಅದಕ್ಕಾಗಿ ಸಂಬಂಧಗಳನ್ನು ಕಳೆದುಕೊಳ್ಳಬೇಡ. ನಮ್ಮ ಹಕ್ಕನ್ನು ಕಾಪಾಡಿಕೊಳ್ಳೋಣ, ಆದರೆ ಮತ್ತೊಬ್ಬರ ಹಕ್ಕನ್ನು ಕಸಿದುಕೊಳ್ಳಬೇಡ. ಭೂಮಿಯ ಮೇಲೆ ಒಡೆತನ ಸಾಧಿಸುವುದಕ್ಕಿಂತ ಮನುಷ್ಯರ ಹೃದಯದಲ್ಲಿ ಸ್ಥಾನ ಗಳಿಸಲು ಪ್ರಯತ್ನಿಸೋಣ.

ಕೊನೆಯ ಮಾತು: ಬದುಕಿರುವಾಗ ನೂರಾರು ಎಕರೆ ಭೂಮಿಗಾಗಿ ನೂರೆಂಟು ನಾಟಕಗಳು; ಕೊನೆಗೆ ಎಲ್ಲವನ್ನೂ ಬಿಟ್ಟುಹೋಗುವಾಗ ಬೇಕಾಗುವುದು ಆರು ಅಡಿ ಮಣ್ಣಿನ ನೆನಪು ಮಾತ್ರ! ಆಸ್ತಿಯ ಗಡಿ ಮುಗಿಯಬಹುದು; ಆದರೆ ಮಾನವೀಯತೆಯ ಮೌಲ್ಯಕ್ಕೆ ಗಡಿಯಿಲ್ಲ. ಬದುಕಿರುವಾಗ ಪ್ರೀತಿ ಹಂಚೋಣ, ಸಂಬಂಧಗಳನ್ನು ಉಳಿಸೋಣ, ನೆಮ್ಮದಿಯಿಂದ ಬದುಕೋಣ. ಏಕೆಂದರೆ ನಾವು ಸಂಪಾದಿಸಿದ ಆಸ್ತಿ ಉಳಿಯಬಹುದು; ಆದರೆ ನಾವು ಬದುಕಿದ ರೀತಿ ಮಾತ್ರ ನಮ್ಮ ನಿಜವಾದ ಪರಿಚಯವಾಗುತ್ತದೆ.

# ದಸರಾ ಹಬ್ಬದ ನವದುರ್ಗೆಯರು



| ಡಾ. ಪ್ರದೀಪಕುಮಾರ ಹೆಬ್ರಿ



ದಸರಾ (ನವರಾತ್ರಿ) ಹಬ್ಬದ ಅತ್ಯಂತ ಪವಿತ್ರ ಮತ್ತು ಪ್ರಮುಖ ಆಕರ್ಷಣೆಯೇ ' ನವದುರ್ಗೆಯರ ಆರಾಧನೆ '. ಒಂಭತ್ತು ದಿನಗಳು ಆದಿಶಕ್ತಿ ದುರ್ಗಾದೇವಿಯು ತಾಳಿರುವ ವಿಭಿನ್ನ ದಿವ್ಯ ಸ್ವರೂಪಗಳನ್ನು ' ನವದುರ್ಗೆಯರು ' ಎಂದು ಆರಾಧಿಸುತ್ತೇವೆ. ಪ್ರತಿದಿನವೂ ದೇವಿಯ ಒಂದೊಂದು ವಿಶಿಷ್ಟ ರೂಪವನ್ನು ಪೂಜಿಸಿ ಆಶೀರ್ವಾದ ಪಡೆಯುವ ಕ್ರಮವಿದೆ.

ಶೈಲಪುತ್ರಿ ನವರಾತ್ರಿಯ ಮೊದಲದಿನ



ಪೂಜಿಸಲ್ಪಡುವ ದೇವಿಯ ರೂಪ. ಈಕೆ ಪರ್ವತರಾಜನ ಮಗಳು. ಸ್ಥಿರತೆ ಮತ್ತು ಧೈರ್ಯದ ಸಂಕೇತ. ಬ್ರಹ್ಮಚಾರಿಣಿ ಎರಡನೇ ದಿನದ ದೇವಿ. ಈಕೆ ತಪೋಸ್ವರೂಪಿಣಿ. ಜ್ಞಾನ ಮತ್ತು ವೈರಾಗ್ಯವನ್ನು ಕರುಣಿಸುವವಳು. ಚಂದ್ರಪ್ರಭಾ ಮೂರನೇ ದಿನದ ದೇವಿ. ತನ್ನ ಹಣೆಯ ಮೇಲೆ ಅರ್ಧಚಂದ್ರಾಕೃತಿಯ ಘಂಟೆ ಧರಿಸಿರುತ್ತಾಳೆ. ಈಕೆ ಶಾಂತಿ ಮತ್ತು ಶೌರ್ಯದ ಸಂಕೇತ.

ಕೂಷ್ಮಾಂಡ ನಾಲ್ಕನೇ ದಿನ ಪೂಜಿಸಲ್ಪಡುವ ದೇವಿ. ತನ್ನ ಮಂದಹಾಸದಿಂದಲೇ ಬ್ರಹ್ಮಾಂಡವನ್ನು ಸೃಷ್ಟಿಸಿದ ಜಗನ್ಮಾತೆ. ಸ್ಕಂದಮಾಲಾ ಐದನೇ ದಿನದ ದೇವಿ. ಕುಮಾರ ಸ್ವಾಮಿಯ( ಸ್ಕಂದ ) ತಾಯಿಯಾಗಿ ಮಾತೃಪ್ರೇಮ ಮತ್ತು ರಕ್ಷಣೆಯನ್ನು ತೋರುವವಳು. ಕಾತ್ಯಾಯಿನಿ ಆರನೇ ದಿನದ ದೇವಿ. ಈಕೆ ಕಾತ್ಯಾಯನ ಮಹರ್ಷಿಗಳ ಪುತ್ರಿಯಾಗಿ ಅವತರಿಸಿ ' ಮಹಿಷಾಸುರ ಮರ್ದನ ' ಮಾಡಿದ ಉಗ್ರಯೋಧ ರೂಪಿಣಿ.

ಕಾಳರಾತ್ರಿ ಏಳನೇ ದಿನ ಪೂಜಿಸಲ್ಪಡುವ ಅತ್ಯಂತ ಭಯಾನಕ ಸ್ವರೂಪೀ ದೇವಿ. ಈಕೆ ದುಷ್ಟಶಕ್ತಿಗಳನ್ನು ನಾಶ ಪಡಿಸಿ ಭಕ್ತರಿಗೆ ಅಭಯ ನೀಡುವವಳು. ಮಹಾಗೌರಿ ಎಂಟನೇ ದಿನದ ರೂಪಿಣಿ. ಈಕೆಯನ್ನು ಆರಾಧಿಸುವ ದಿನವನ್ನು ' ದುರ್ಗಾಷ್ಟಮಿ ' ಎಂದು ಕರೆಯುತ್ತಾರೆ. ಈಕೆ ಅತ್ಯಂತ ಶಾಂತ, ಪವಿತ್ರ, ಕರುಣಾಮಯಿ ರೂಪಿ, ಜ್ಞಾನವನ್ನು ಕರುಣಿಸುವವಳು. ಸಿದ್ಧಿಧಾತ್ರಿ ಒಂಭತ್ತನೇ ದಿನ ಆರಾಧಿಸಲ್ಪಡುವವಳು. ಈಕೆಯನ್ನು ಆರಾಧಿಸುವ ದಿನವನ್ನು ' ಮಹಾನವಮಿ ' ಎನ್ನುತ್ತಾರೆ. ಈಕೆ ಭಕ್ತರಿಗೆ ಸರ್ವಸಿದ್ಧಿಗಳು ಮತ್ತು ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಕರುಣಿಸುವವಳು.

ದೇವಿಯ ಈ ಒಂಭತ್ತು ರೂಪಗಳು ( ನವರೂಪ) ಕೇವಲ ಪೌರಾಣಿಕ ಕಥೆಗಳಲ್ಲ. ಮಾನವರ ಜೀವನದ ಧೈರ್ಯ, ಜ್ಞಾನ, ಕರುಣೆ ಮತ್ತು ವಿಜಯದ ವಿವಿಧ ಹಂತಗಳನ್ನು ಪ್ರತಿನಿಧಿಸುವಂಥದ್ದು. ನವದುರ್ಗೆಯರ ಆರಾಧನೆ ಪ್ರಕೃತಿಯ ಶಕ್ತಿ ಮತ್ತು ಶ್ರೀಚೈತನ್ಯಕ್ಕೆ ಸಮರ್ಪಿಸುವ ಪರಮ ಗೌರವ.

# ಅಕಾಲಿಕ ಮೃತ್ಯುವಿಗೆ ಬಾಗಿಲು ಮುಚ್ಚಿ

ಮೃತ್ಯುವನ್ನು ನಾವು ದೂರದ ಮುಸುಂಟರಗಾಳಿಯಲ್ಲಿ ಹುಡುಕುತ್ತೇವೆ, ಆದರೆ ಅದು ಬಚ್ಚಿಟ್ಟಿರುವುದು ನಮ್ಮ ಮನೆಯ ಜಾರು ನೆಲದಲ್ಲಿ, ಹೆಲ್ಮೆಟ್ ಹಾಕದ ಒಂದು ಕ್ಷಣದಲ್ಲಿ, ತೆರೆದ ವಿದ್ಯುತ್ ತಂತಿಯ ನಿರ್ಲಕ್ಷ್ಯದಲ್ಲಿ. ಸಣ್ಣ ಎಡವಟ್ಟುಗಳೇ ದೊಡ್ಡ ಸಂಕಟಕ್ಕೆ ದಾರಿ ಮಾಡಿಕೊಡುತ್ತವೆ.

ದೇಹ ನಿರಂತರ ಗಂಟೆ ಬಾರಿಸುತ್ತದೆ. ಎದೆ ನೋವು, ಉಸಿರಾಟದ ತೊಂದರೆ, ಅಸಹಜ ಸುಸ್ತು ಇವು ಅನಿಲವಲ್ಲ, ಆಯಾಸವಲ್ಲ; ಬದುಕು ಕಳುಹಿಸುವ ಎಚ್ಚರಿಕೆ ಪತ್ರಗಳು. ತಪಾಸಣೆಯನ್ನು ಮುಂದೂಡುವುದು ಎಂದರೆ ಕತ್ತಲಲ್ಲಿ ಮುಳ್ಳಿನ ಹಾದಿಯಲ್ಲಿ ನಡೆಯುವುದು. ಆರಂಭದಲ್ಲಿ ಪತ್ತೆಯಾದರೆ ಚಿಕಿತ್ಸೆ ಕೊಂಬೆ ಕತ್ತರಿಸಿದಂತೆ, ತಡವಾದರೆ ಬೇರು ಕೀಳಬೇಕು.

ಸುರಕ್ಷತೆ ಕಾನೂನಿನ ಭಯದಿಂದಲ್ಲ, ಪ್ರೀತಿಯಿಂದ ಬರಬೇಕು. ರಸ್ತೆಯಲ್ಲಿ ನಿಯಮ ಪಾಲನೆ, ಕಾರ್ಖಾನೆಯಲ್ಲಿ ಹೆಲ್ಮೆಟ್-ಕೈಗವಸು, ಮನೆಯಲ್ಲಿ ಮೆಟ್ಟಿಲು-ಅಡುಗೆಮನೆಯ ಜಾಗೃತಿ ಇವು ಜೀವದ ಕಾವಲುಗೋಡೆಗಳು.

ಜೀವನವೆಂದರೆ ರೋಗವಿಲ್ಲದಿರುವುದಲ್ಲ,



ಜವಾಬ್ದಾರಿಯುತವಾಗಿರುವುದು. ಕುಟುಂಬ ಒಬ್ಬರನ್ನೊಬ್ಬರು ಕಾಳಜಿ ಮಾಡಿದಾಗಲೇ ಸುರಕ್ಷತೆಯ ಸಂಸ್ಕೃತಿ ಬೆಳೆಯುತ್ತದೆ. ಸಣ್ಣ ಎಚ್ಚರವೇ ಅಕಾಲಿಕ ಅಂತ್ಯದ ಬಾಗಿಲಿಗೆ ಬೀಗ ಹಾಕುತ್ತದೆ.

ಅಂಕಣ-48

ಸಾವು ಸಂಕಟಪಡುವ ಸಂಗತಿಗಳು..!

|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,